ಕರ್ನಾಟಕ ಸರ್ಕಾರ

# ಕಲಿ ಕನ್ನಡ – ೩




## ಮೂರನೆಯ ತರಗತಿ

©KTBS Not to be republished

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)**

೧೦೦ಅಡಿ ವರ್ತುಲ ರಸ್ತೆ, ಬನಶಂಕರಿ ೩ನೆಯ ಹಂತ,

ಬೆಂಗಳೂರು–೫೬೦೦೮೫





# ಪಠ್ಯಪುಸ್ತಕ ರಚನಾ ಸಮಿತಿ

## ಅಧ್ಯಕ್ಷರು

**ಡಾ. ನಾ. ದಾಮೋದರ ಶೆಟ್ಟಿ,** ನಿವೃತ್ತ ಪ್ರಾಧ್ಯಾಪಕರು. ಪ್ರಸಾಧನ, ಭಾರತೀನಗರ, ಬಿಜೈ, ಮಂಗಳೂರು–೪

## ಸದಸ್ಯರು

**ಶ್ರೀಮತಿ ಸುಶೀಲ,** ಸ.ಶಿ., ಸರ್ಕಾರಿ ಪದವಿಪೂರ್ವಕಾಲೇಜು, ಮದ್ದೂರು ತಾ, ಮಂಡ್ಯ ಜಿಲ್ಲೆ

**ಶ್ರೀ ಇಂದ್ರಕುಮಾರ್ ಎಚ್.ಟಿ.,** ಸ.ಶಿ., ಸ.ಹಿ.ಪ್ರಾ.ಶಾಲೆ, ಕುರ್ಕಿ, ದಾವಣಗೆರೆ ತಾ – ೧೪

**ಶ್ರೀ ಎ. ಭುಜಂಗಾಚಾರ್,** ಸ.ಶಿ., ಶ್ರೀಜ್ವಾಲಾಮಾಲಿನಿ ಬಾಲಿಕಾ ಪ್ರೌಢಶಾಲೆ, ಸಿಂಹನಗದ್ದೆ, ಚಿಕ್ಕಮಗಳೂರು ಜಿ.

**ಶ್ರೀ ಪರಮೇಶ್ವರ ಎಂ. ನಿಂಬರಗಿ,** ಸ.ಶಿ., ಸರ್ಕಾರಿ ಪ್ರೌಢಶಾಲೆ, ಹುಣಸಿಹಡಗಿಲ, ಕಲಬುರಗಿ ಜಿಲ್ಲೆ.

**ಶ್ರೀಮತಿ ಎಂ. ತ್ರಿವೇಣಿ,** ಸ.ಶಿ., ಸ.ಕಿ.ಪ್ರಾ. ಶಾಲೆ ಗುಡ್ರುಕೊಪ್ಪ, ಶೆಟ್ಟಿಹಳ್ಳಿ ಅಂಚೆ, ಶಿವಮೊಗ್ಗ ತಾಲ್ಲೂಕು.

## ಚಿತ್ರಕಲಾವಿದರು

**ಶ್ರೀ ಬಾಗೂರು ಮಾರ್ಕಾಂಡೇಯ,** ಕಲಾವಿದರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು.

## ಪರಿಶೀಲಕರು

**ಶ್ರೀ ಡಾ. ಪಿ ಮಹಾದೇವಯ್ಯ,** ರೀಡರ್, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಹೊಸಪೇಟೆ ತಾ॥ ಬಳ್ಳಾರಿ ಜಿಲ್ಲೆ.

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

## ಕಾರ್ಯಕ್ರಮ ಸಂಯೋಜಕರು

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಬೆಂಗಳೂರು.

©KTBS Not to be republished

# ಮುಮ್ಮಾತು

೨೦೦೮–೨೦೦೯ ನೇ ಶೈಕ್ಷಣಿಕ ವರ್ಷದಿಂದ ಕರ್ನಾಟಕ ನಾಡಿನಾದ್ಯಂತ ಕನ್ನಡ ತಾಯ್ನುಡಿ ಅಲ್ಲದವರಿಗೆ ಒಂದನೇ ತರಗತಿಯಿಂದ ಪರಿಚಯ ಭಾಷೆಯಾಗಿ ಕನ್ನಡವನ್ನು ಜಾರಿಗೊಳಿಸುವುದರ ಮೂಲಕ ಕನ್ನಡ ಕಲಿಕೆ ಮತ್ತು ಕಲಿಸುವಿಕೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಕಲಿ ಕನ್ನಡ – ೩ ಪಠ್ಯಪುಸ್ತಕವನ್ನು ನುರಿತ ಶಿಕ್ಷಣ ತಜ್ಞರು ಮತ್ತು ತರಗತಿಯ ಅನುಭವೀ ಅಧ್ಯಾಪಕರನ್ನೊಳಗೊಂಡ ಸಮಿತಿ ಸಿದ್ಧಪಡಿಸಿದ್ದು, ೨೦೧೫–೧೬ನೇ ಸಾಲಿನಿಂದ ಜಾರಿಗೊಳಿಸಲಾಗುತ್ತಿದೆ. ಭಾಷಾ ಕಲಿಕೆಯಲ್ಲಿ ಮಕ್ಕಳು ಸಹಜ ಹಾಗೂ ಸಕ್ರಿಯವಾಗಿ ಭಾಗಿಯಾಗಿ ಕಲಿಕೆಯ ಸಾಮರ್ಥ್ಯಗಳನ್ನು ಪರಿಣಾಮಕಾರಿಯಾಗಿ ಹೆಚ್ಚಿಸಿಕೊಂಡು ಭಾಷಾ ಜ್ಞಾನವನ್ನು ಸದೃಢವಾಗಿ ಪಡೆದುಕೊಳ್ಳಬೇಕೆಂಬುದೇ ಪಠ್ಯದ ಮೂಲೋದ್ದೇಶ. ಕನ್ನಡ ಭಾಷೆ ಹಾಗೂ ನಾಡಿನ ಬಗೆಗೆ ಹೆಚ್ಚು ಅಭಿಮಾನ, ಆಸಕ್ತಿ, ಅಕ್ಕರೆಯನ್ನು ಬೆಳೆಸಿಕೊಳ್ಳಲು ಪಠ್ಯದಲ್ಲಿನ ಪೂರ್ವಸಿದ್ಧತಾ ಸೇತುಬಂಧ ಪಾಠ, ಗುಣಿತಾಕ್ಷರ, ಒತ್ತಕ್ಷರ ಮತ್ತು ಪದ್ಯ–ಗದ್ಯಪಾಠಗಳು ಅನುವಾಗಿವೆ. ಇದು ಕನ್ನಡ ಪರಿಚಯ ಭಾಷಾ ಪಠ್ಯಪುಸ್ತಕವಾಗಿರುವುದರಿಂದ ಅಭ್ಯಾಸಪುಸ್ತಕವನ್ನು ಪ್ರತ್ಯೇಕವಾಗಿ ನೀಡದೆ ಪ್ರತಿ ಪಾಠದ ಕೊನೆಯಲ್ಲಿ ಅಭ್ಯಾಸಕ್ಕಾಗಿ ಅವಕಾಶ ಕಲ್ಪಿಸಲಾಗಿದೆ. ಮಕ್ಕಳಲ್ಲಿ ಸೃಜನಶೀಲತೆಯನ್ನು ಮೂಡಿಸುವಲ್ಲಿ ಕಲಿ ಕನ್ನಡ – ೩ ಪಠ್ಯಪುಸ್ತಕ ಸೂಕ್ತವಾಗಿದೆ. ಮಾನವೀಯ ಮೌಲ್ಯಗಳನ್ನು ಸಮಾನಾಂತರ ಹಾಗೂ ಲಂಬ ಶ್ರೇಣಿಯಲ್ಲಿ ಕ್ರಿಯಾತ್ಮಕಗೊಳಿಸುವಲ್ಲಿ ಇಡೀ ಪಠ್ಯ ಸಮರ್ಪಕವಾಗಿದೆ. ಸಂತಸಭರಿತ ಕಲಿಕೆಯಲ್ಲಿ ಆಸಕ್ತಿ, ವಿಶ್ವಾಸ, ನಂಬಿಕೆ ಮತ್ತು ಕುತೂಹಲವನ್ನು ಉಳಿಸಿಕೊಳ್ಳುವ ತಮ್ಮ ಸದಾಶಯ ಬಹುಮಟ್ಟಿಗೆ ಸಫಲತೆಯನ್ನು ಪಡೆದಿದೆ ಎಂಬುದು ನಮ್ಮ ನಮ್ರ ಭಾವ.

**ಪ್ರಸ್ತುತ ಕಲಿ ಕನ್ನಡ – ೩ :** ಪಠ್ಯ ರಚನಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕರಿಸಿದ ರಚನಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರೆಲ್ಲರಿಗೂ ಅಭಿಮಾನ ಪೂರ್ವಕ ವಂದನೆಗಳು ಹಾಗೂ ಈ ಪಠ್ಯಪುಸ್ತಕವನ್ನು ಪರಿಷ್ಕರಿಸಿದ ಪರಿಷ್ಕರಣಾ ಸಮಿತಿಯ ಎಲ್ಲ ಸದಸ್ಯರಿಗೂ ಅಭಿನಂದನೆಗಳು. ಈ ಪಠ್ಯದ ಬಗ್ಗೆ ಬರುವ ಎಲ್ಲ ರೀತಿಯ ಪೂರಕ, ರಚನಾತ್ಮಕ, ಚಿಂತನಶೀಲ ಸಲಹೆ ಸೂಚನೆಗಳನ್ನು ಕರ್ನಾಟಕ ಪಠ್ಯಪುಸ್ತಕ ಸಂಘ ಸದಾ ಮುಕ್ತವಾಗಿ ಸ್ವಾಗತಿಸುತ್ತದೆ.

**ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–೮೫.

©KTBS Not to be republished

# ನಾಂದಿ

ಪ್ರಿಯ ಬಂಧುಗಳೇ,

ಮೂರನೆಯ ತರಗತಿ ಪರಿಚಯ ಭಾಷಾ ಪಠ್ಯಪುಸ್ತಕ ರಚನೆ ಮಾಡುವಾಗ ಸರಳತೆಯ ಹಾದಿಯನ್ನು ಅನುಸರಿಸಿದ್ದೇವೆ. ಕೊನೆಯ ಭಾಗಕ್ಕೆ ಬರುತ್ತ ಸಾಮರ್ಥ್ಯಕ್ಕೆ ಅನುಗುಣವಾಗಿ ಕನಿಷ್ಠ ಸಾವಿರ ಪದಗಳ ಬಂಡವಾಳವನ್ನು ಮಕ್ಕಳು ಹೊಂದಬೇಕೆಂಬ ಉದ್ದೇಶದಿಂದ ತುಸು ವಿಸ್ತಾರವಾದ ಪಾಠಗಳನ್ನು ಅಳವಡಿಸಿಕೊಂಡಿದ್ದೇವೆ. ಪಾಠಗಳನ್ನು ಆಯ್ಕೆ ಮಾಡಿಕೊಳ್ಳುವಾಗ, ರಚಿಸುವಾಗ ಎನ್.ಸಿ.ಎಫ್ ೨೦೦೫, ಕೆ.ಸಿ.ಎಫ್ ೨೦೦೭, ಆರ್.ಟಿ.ಇ ೨೦೦೯ ಮತ್ತು ಸಿ.ಸಿ.ಇ ಯಲ್ಲಿನ ಪ್ರಮುಖಾಂಶಗಳನ್ನು ಪರಿಗಣಿಸಲಾಗಿದೆ.

ಮಕ್ಕಳು ಆಲಿಸಿ, ಖುಷಿ ಪಡಲು ಸರಳ ಚಟುವಟಿಕೆಗಳ ಮಾಲೆಯೊಂದನ್ನು ಆರಂಭದ ಸೇತುಬಂಧದಲ್ಲಿ ನೀಡಲಾಗಿದೆ. ಇಲ್ಲಿನ ಪಾಠಗಳು ಮಕ್ಕಳ ಕಿವಿಗೆ ಬಿದ್ದು ಅವರನ್ನು ಮುದಗೊಳಿಸಿ, ಮುಂದಿನ ಪಾಠಗಳನ್ನು ಆಲಿಸುವುದಕ್ಕೆ, ಮಾತನಾಡುವುದಕ್ಕೆ, ಓದುವುದಕ್ಕೆ ಹಾಗೂ ಬರೆಯುವುದಕ್ಕೆ ಅಣಿಗೊಳಿಸಬೇಕೆಂಬುದು ನಮ್ಮ ಉದ್ದೇಶವಾಗಿದೆ. ಇಲ್ಲಿ ಶಿಕ್ಷಕರಿಗೆ ಸೂಚನೆಗಳು ಅನ್ವಯಿಸುವಂತೆ ನೀಡಲಾಗಿದ್ದು, ಆ ಸೂಚನೆಗಳಂತೆ ವಿದ್ಯಾರ್ಥಿಗಳಿಂದ ಅಭ್ಯಾಸದ ಕೆಲಸಗಳನ್ನು ಮಾಡಿಸಬೇಕಾಗಿದೆ. ಮಕ್ಕಳಿಗೆ ಓದಿ ಅರ್ಥಮಾಡಿಕೊಳ್ಳಲು ಮೊದಮೊದಲು ಕಷ್ಟವಾಗಬಹುದು ಎಂಬುದನ್ನು ಗಮನಿಸಿ ಶಿಕ್ಷಕರ ಮೂಲಕ ವಿದ್ಯಾರ್ಥಿಗಳಿಗೆ ಪ್ರಶ್ನೆಗಳು ತಲುಪುವಂತೆ ನೋಡಿಕೊಳ್ಳಲಾಗಿದೆ. ಪಠ್ಯವಸ್ತುವಿಗೆ ಅನುಗುಣವಾಗಿ ಹದಿನಾಲ್ಕು ಪಾಠಗಳನ್ನಷ್ಟೇ ನಿಗದಿಗೊಳಿಸಿಕೊಂಡಿದೆ. ಅವುಗಳಲ್ಲಿ ಒತ್ತಕ್ಷರಗಳನ್ನು ಕಲಿಯಲು ಎರಡು ಪಾಠಗಳನ್ನು ಬಳಸಿಕೊಳ್ಳಲಾಗಿದೆ. ಉಳಿದ ಹನ್ನೆರಡು ಪಾಠಗಳಲ್ಲಿ ಆರು ಪದ್ಯ ಮತ್ತು ಆರು ಗದ್ಯಗಳಿವೆ. ವರ್ಷದುದ್ದಕ್ಕೂ ಪಾಠ-ಪ್ರವಚನಗಳನ್ನು ಸಿ.ಸಿ.ಇ.ಯೊಂದಿಗೆ ಪೂರ್ತಿಗೊಳಿಸುವ ಹೊತ್ತಿಗೆ ಮಕ್ಕಳು ಸರಳವಾಕ್ಯಗಳನ್ನು ಓದುವ, ಬರೆಯುವ ಹಾಗೂ ಆಲಿಸಿ, ಅರ್ಥೈಸಿಕೊಂಡು ಸಹಜವಾಗಿ ಮಾತನಾಡುವ ಚೈತನ್ಯ ಪಡೆಯಬೇಕೆಂಬುದು ಪಠ್ಯಪುಸ್ತಕ ರಚನಾ ಸಮಿತಿಯ ಆಶಯವಾಗಿದೆ.

ಇದು ಕನ್ನಡ ಪರಿಚಯ ಭಾಷಾ ಪಠ್ಯಪುಸ್ತಕವಾಗಿರುವುದರಿಂದ ಅಭ್ಯಾಸ ಪುಸ್ತಕವನ್ನು ಪ್ರತ್ಯೇಕವಾಗಿ ನೀಡದೆ, ಪ್ರತಿ ಪಾಠದ ಕೊನೆಯಲ್ಲಿ ಅಭ್ಯಾಸಗಳನ್ನು ಬರೆಯಲು ಅವಕಾಶ ಕಲ್ಪಿಸಿಕೊಡಲಾಗಿದೆ. ಅರ್ಥ ತಿಳಿಯಿರಿ, ವಿವರ ತಿಳಿಯಿರಿ, ಅಭ್ಯಾಸ, ಭಾಷಾ ಚಟುವಟಿಕೆ, ಯೋಜನೆ ಮತ್ತು ಶುಭನುಡಿ–ಈ ಶೀರ್ಷಿಕೆಗಳ ಅಡಿಯಲ್ಲಿ ಹಲವಾರು ಚಟುವಟಿಕೆಗಳನ್ನು ನೀಡಲಾಗಿದೆ. 'ಅರ್ಥ ತಿಳಿಯಿರಿ'ಯಲ್ಲಿ ಪಾಠಗಳಲ್ಲಿ ಬಂದಿರುವ ಹೊಸ ಪದಗಳಿಗೆ ಅರ್ಥವನ್ನು ನೀಡಿದರೆ, ಒಂದು ಪದಕ್ಕಿಂತ ಹೆಚ್ಚಿನ ವಿವರಣೆ ಬಯಸುವ ಪದಗಳನ್ನು 'ವಿವರ ತಿಳಿಯಿರಿ' ವಿಭಾಗದಲ್ಲಿ ಅಳವಡಿಸಿಕೊಳ್ಳಲಾಗಿದೆ. 'ಅಭ್ಯಾಸ' ಶೀರ್ಷಿಕೆಯಡಿಯಲ್ಲಿ ಪಠ್ಯಾಂಶಕ್ಕೆ ಪೂರಕವಾದ

©KTBS Not to be republished

ಪ್ರಶ್ನೋತ್ತರ, ಖಾಲಿ ಬಿಟ್ಟ ಸ್ಥಳ ತುಂಬಿರಿ, ಯಾರು ಹೇಳಿದರು? ಹೊಂದಿಸಿ ಬರೆಯಿರಿ ಇತ್ಯಾದಿ ಚಟುವಟಿಕೆಗಳನ್ನು ನೀಡಲಾಗಿದೆ. ಹಾಗೆಯೇ 'ಭಾಷಾ ಚಟುವಟಿಕೆ' ಮತ್ತು 'ಯೋಜನೆ' ಶೀರ್ಷಿಕೆಯಡಿಯಲ್ಲಿ ಮಕ್ಕಳ ಸಾಮರ್ಥ್ಯ ಬೆಳವಣಿಗೆಗೆ ಅನುಕೂಲವಾಗುವ, ಸ್ವತಂತ್ರವಾಗಿ ಜ್ಞಾನವನ್ನು ಕಟ್ಟಿಕೊಳ್ಳುವ ಹಾಗೂ ಕಲಿತ ಜ್ಞಾನವನ್ನು ಹೊರಗಿನ ಸನ್ನಿವೇಶಗಳಿಗೆ ಅನ್ವಯಿಸಿಕೊಳ್ಳುವ ಚಟುವಟಿಕೆಗಳನ್ನು ನೀಡಲಾಗಿದೆ. ವೈಯಕ್ತಿಕ, ಸಾಮಾಜಿಕ ಮತ್ತು ರಾಷ್ಟ್ರೀಯ ಮೌಲ್ಯಗಳನ್ನು ಬೆಳೆಸುವ ದೃಷ್ಟಿಯಿಂದ 'ಶುಭನುಡಿ'ಗಳನ್ನು ಕೊಡಲಾಗಿದೆ. ಪುಸ್ತಕದ ಕೊನೆಯಲ್ಲಿ ಮೂರನೇ ತರಗತಿಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 'ಪದ ಖಜಾನೆ'ಯನ್ನು ನೀಡಲಾಗಿದೆ. ಪಾಠಗಳಿಗೆ ನೇರವಾಗಿ ಸಂಬಂಧಪಡದ ಅರ್ಥಗಳನ್ನೂ ಅಲ್ಲಿ ಕೊಡಲಾಗಿದೆ. ಮಕ್ಕಳು ಕಡ್ಡಾಯವಾಗಿ ಮನೆಯಲ್ಲೊಂದು ಪುಟ್ಟ ನಿಘಂಟನ್ನು ಇರಿಸಿಕೊಳ್ಳಬೇಕು. ಪದ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ನಿಘಂಟು ಅತ್ಯಂತ ಅನಿವಾರ್ಯ. ಶಿಕ್ಷಕರು ಇಲ್ಲಿನ ಆಶಯಗಳನ್ನು ಅರ್ಥೈಸಿಕೊಂಡು ವಿದ್ಯಾರ್ಥಿಗಳಿಗೆ ಕಲಿಸಿದಾಗ ಮಾತ್ರ ಪಠ್ಯಪುಸ್ತಕವು ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ.

ಪಠ್ಯಪುಸ್ತಕ ರಚನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕರಿಸಿದ ಸಮಿತಿಯ ಎಲ್ಲಾ ಸದಸ್ಯರಿಗೆ, ಚಿತ್ರಕಲಾವಿದರಿಗೆ, ಪರಿಶೀಲಕರಿಗೆ ಹಾಗೂ ಪರಿಷ್ಕರಣಾ ಸಮಿತಿಯ ಸದಸ್ಯರಿಗೂ ವಂದನೆಗಳು. ಪಠ್ಯಪುಸ್ತಕ ರಚನೆಯ ಪ್ರತಿ ಹಂತದಲ್ಲಿ ಸಲಹೆ ಮತ್ತು ಮಾರ್ಗದರ್ಶನ ನೀಡಿದಂತಹ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ನಾಗೇಂದ್ರ ಕುಮಾರ್ ಅವರಿಗೆ ಹಾಗೂ ಕಾರ್ಯಾಗಾರಗಳನ್ನು ವ್ಯವಸ್ಥಿತವಾಗಿ ಆಯೋಜನೆ ಮಾಡಿದಂತಹ ಮಾನ್ಯ ಉಪನಿರ್ದೇಶಕರಾದ ಶ್ರೀ ಪಾಂಡುರಂಗ ಅವರಿಗೆ ಪಠ್ಯಪುಸ್ತಕ ರಚನಾ ಸಮಿತಿಯ ಪರವಾಗಿ ಹೃತ್ಪೂರ್ವಕ ವಂದನೆಗಳು.

**ಡಾ. ನಾ.ದಾಮೋದರ ಶೆಟ್ಟಿ**
ಅಧ್ಯಕ್ಷರು

©KTBS Not to be republished



# ಪರಿಚಯ ಭಾಷೆ ಕನ್ನಡ – ಪರಿವಿಡಿ


| ಕ್ರ.ಸಂ. | ಪಾಠದ ಶೀರ್ಷಿಕೆ | | ಪ್ರಕಾರ | ಪು.ಸಂ. |
|---|---|---|---|---|
| ೧ | ಸೇತುಬಂಧ | ಅ. ಬಣ್ಣ ತುಂಬಿರಿ – ಹೆಸರು ಹೇಳಿರಿ | | ೦೧ |
| | | ಆ. ನಾವೆಲ್ಲರು ಒಂದೇ – ರತ್ನಾ ಕಾಳೇಗೌಡ | ಪದ್ಯ | ೦೨ |
| | | ಇ. ಮ್ಯಾಂವ್ ಎಂದವರ್‍ಯಾರು? | ಕಥೆ | ೦೩ |
| | | ಈ. ವರ್ಣಮಾಲೆ ಪೂರ್ಣಗೊಳಿಸಿರಿ | | ೦೪ |
| ೨ | ಒತ್ತಕ್ಷರ ಕಲಿಕೆ | ಒತ್ತಕ್ಷರ ಕಲಿಕಾ ಪಾಠ – ೧ | | ೦೬ |
| | | ಒತ್ತಕ್ಷರ ಕಲಿಕಾ ಪಾಠ – ೨ | | ೧೦ |
| | | ಒತ್ತಕ್ಷರ ಕಲಿಕಾ ಪಾಠ – ೩ | | ೧೫ |
| ೩ | ಚಿಟ್ಟೆ – ಡಾ. ಪಿ. ನಾರಾಯಣ ಭಟ್ಟ | | ಪದ್ಯ | ೨೩ |
| ೪ | ಮೆದುಮಾತು | | | ೨೭ |
| ೫ | ಅಕ್ಟೋಬರ್ ಎರಡು – ಗುರುರಾಜ ಬೆಣಕಲ್ | | ಪದ್ಯ | ೩೨ |
| ೬ | ಕಾಗದದ ದೋಣಿ | | | ೩೭ |
| ೭ | ಕಲಿತ ಪಾಠ – ರಾಜಶೇಖರ ಕುಕ್ಕುಂದಾ | | ಪದ್ಯ | ೪೩ |
| ೮ | ಬಾಲಕಿಯ ಸಾಹಸ | | | ೪೭ |
| ೯ | ಕೊಕ್ಕರೆಯ ಪ್ರಾರ್ಥನೆ – ಎಚ್. ಡುಂಡಿರಾಜ್ | | ಪದ್ಯ | ೫೨ |
| ೧೦ | ಆರೋಗ್ಯ ಭಾಗ್ಯ | | | ೫೭ |
| ೧೧ | ಮಸಾಲೆ ದೋಸೆ – ಟಿ.ಎಸ್. ನಾಗರಾಜ ಸೆಟ್ಟಿ | | ಪದ್ಯ | ೬೩ |
| ೧೨ | ಕರುಣೆಯ ಹಾದಿ | | | ೬೯ |
| ೧೩ | ಮಂಗನ ನ್ಯಾಯ – (ಸಂಗ್ರಹ) | | ಪದ್ಯ | ೭೪ |
| ೧೪ | ಯಾರು ಹೆಚ್ಚು? | | | ೭೯ |
| ೧೫ | ಪದ ಖಜಾನೆ | | | ೮೬ |


©KTBS Not to be republished



# ೧. ಸೇತುಬಂಧ

ಅ) ಈ ಚಿತ್ರಗಳಿಗೆ ಹೊಂದುವ ಬಣ್ಣ ತುಂಬಿಸಿರಿ, ಹೆಸರು ಹೇಳಿಸಿರಿ.



©KTBS Not to be republished

## (ಆ) ನಾವೆಲ್ಲರು ಒಂದೇ (ಪದ್ಯ)

**ಪದ್ಯವನ್ನು ಹಾವಭಾವದೊಂದಿಗೆ ಮಕ್ಕಳಿಂದ ಹಾಡಿಸಿರಿ.**



ನಾವೆಲ್ಲರು ಒಂದೇ
ಮನುಜ ಮತ ಒಂದೇ

ಬೀಸುವ ಗಾಳಿ ಉರಿಯುವ ಬೆಂಕಿ
ಬೆಳಗುವ ಸೂರ್ಯ ಒಂದೇ

ಒಂದೇ ರಕ್ತ ಒಂದೇ ಜೀವ
ಮಾನವ ಕುಲವೊಂದೇ

ಜಾತಿ ಭೇದ ಬೇಡ ನಮಗೆ
ನಾವೆಲ್ಲರು ಒಂದೇ

ಉಸಿರು ಒಂದೇ ಹಸಿರು ಒಂದೇ
ಕುಡಿಯುವ ನೀರು ಒಂದೇ

ನಮ್ಮ ನಾಡಿನ ನಮ್ಮಯ ನುಡಿಯನು
ಉಲಿಯಲಿ ನಾಲಿಗೆ ಇಂದೇ

ನಮ್ಮ ಗುರಿ ಒಂದೇ ನಮ್ಮ ಶಕ್ತಿಯು ಒಂದೇ
ನಾವೆಲ್ಲರು ಒಂದೇ

– ರತ್ನಾ ಕಾಳೇಗೌಡ

Not to be republished ©KTBS




## (ಇ) ಮ್ಯಾಂವ್ ಎಂದವರ್ಯಾರು? (ಕಥೆ)

**ಶಿಕ್ಷಕರು ಈ ಕಥೆಯನ್ನು ಹೇಳಿ, ಸಂಬಂಧಿಸಿದ ಪ್ರಶ್ನೆಗಳಿಗೆ ಮೌಖಿಕವಾಗಿ ಮಕ್ಕಳಿಂದ ಉತ್ತರಿಸಲಿ.**

ಒಂದು ನಾಯಿಮರಿ ಮಂಚದ ಕೆಳಗೆ ಮಲಗಿ ನಿದ್ದೆ ಮಾಡುತ್ತಿತ್ತು. ಆಗ ಅದಕ್ಕೆ 'ಮ್ಯಾಂವ್' ಎಂಬ ಸದ್ದು ಕೇಳಿಸಿತು. ನಾಯಿಮರಿ ಥಟ್ಟನೆ ಎದ್ದು ಆಚೀಚೆ ನೋಡಿತು. ಸದ್ದು ಎಲ್ಲಿಂದ ಬಂತೆಂದು ಎಲ್ಲ ಕಡೆಯಲ್ಲೂ ಹುಡುಕಿತು. ಟ್ರಂಕಿನ ಮೇಲೆ, ಹೊದಿಕೆಯ ಕೆಳಗೆ, ಮಡಕೆಯ ಹಿಂದೆ. ಆದರೆ ಎಲ್ಲಿಯೂ ಯಾರೂ ಇರಲಿಲ್ಲ.

ಅದು ಮನೆಯ ಹೊರಗೆ ಬಂತು. ಆಗ ಅದಕ್ಕೆ ಒಂದು ಹುಂಜ ಭೇಟಿಯಾಯಿತು. ನಾಯಿಮರಿ ಹುಂಜವನ್ನು ಕೇಳಿತು.



"ನೀನು ಮ್ಯಾಂವ್ ಎಂದು ಕೂಗಿದೆಯಾ?"


ಹುಂಜ "ಕೊಕ್ಕೊಕ್ಕೋ" ಎಂದಿತು.

"ನಿನಗೆ ಬೇರೆ ಏನೂ ಮಾತನಾಡಲು ಬರುವುದಿಲ್ಲವೆ?" ಎಂದು ಕೇಳಿತು ನಾಯಿಮರಿ.

ಮತ್ತೆ ಹುಂಜ "ಕೊಕ್ಕೊಕ್ಕೋ" ಎಂದಿತು.


ನಾಯಿಮರಿ ತಲೆ ಅಲ್ಲಾಡಿಸಿ ಮುಂದೆ ನಡೆಯಿತು. ಸಮೀಪದಲ್ಲಿಯೇ ಕೆರೆಯ ದಡದ ಮೇಲೆ ಒಂದು ಕಪ್ಪೆ ಕುಳಿತಿತ್ತು. ನಾಯಿಮರಿ ಕಪ್ಪೆಗೆ ಕೇಳಿತು, "ನೀನು ಮ್ಯಾಂವ್ ಎಂದು ಕೂಗಿದೆಯಾ?"

ಕಪ್ಪೆ "ವಟರ್ ವಟರ್" ಎಂದಿತು. "ಅಯ್ಯೋ! ಕಪ್ಪೆಯೇ, ನೀನು ಮ್ಯಾಂವ್ ಎಂದು ಕೂಗಿದೆಯಾ?" ಎಂದು ಮತ್ತೆ ಕೇಳಿತು.



'ವಟರ್, ವಟರ್' ಎಂದು ಮತ್ತೊಮ್ಮೆ ಹೇಳಿ ಕಪ್ಪೆ ನೀರಿಗೆ ಜಿಗಿದು ಮಾಯವಾಯಿತು.

ನಾಯಿಮರಿ ಮತ್ತೆ ಆಲೋಚಿಸುತ್ತಾ ಮನೆಯ ಕಡೆಗೆ ಬಂದಿತು. ಕೊಟ್ಟಿಗೆಯಲ್ಲಿದ್ದ ಹಸುವಿಗೆ, "ನೀನು ಮ್ಯಾಂವ್ ಎಂದು ಕೂಗಿದೆಯಾ?" ಎಂದಿತು. ಹಸು "ಅಂಬಾ.. ಅಂಬಾ.." ಎಂದಿತು.



"ಅಯ್ಯೋ ಹಸುವೂ ಅಂಬಾ ಅನ್ನುತ್ತಿದೆ. ಯಾರು ಮ್ಯಾಂವ್ ಎಂದವರು?" ಎಂದು ಯೋಚಿಸುತ್ತಾ ನಾಯಿಮರಿ ಮಂಚದ ಕೆಳಗೆ ನುಗ್ಗುವಾಗ ಮತ್ತೆ 'ಮ್ಯಾಂವ್' ಎಂದು ಸದ್ದಾಯಿತು. ಈಗ ನೀವೇ ಹೇಳಿ ಮ್ಯಾಂವ್ ಎಂದವರಾರು?



©KTBS Not to be republished



## ಪ್ರಶ್ನೆಗಳು

೧. ನಾಯಿಮರಿ ಎಲ್ಲಿ ಮಲಗಿತ್ತು?

೨. ನಾಯಿಮರಿ ಹುಂಜವನ್ನು ಏನೆಂದು ಕೇಳಿತು?

೩. ಕಪ್ಪೆ ನಾಯಿಮರಿಗೆ ಏನೆಂದು ಉತ್ತರಿಸಿತು?

೪. ಹಸು ನಾಯಿಮರಿಗೆ ಏನೆಂದು ಹೇಳಿತು?

**ಈ) ಖಾಲಿ ಬಿಟ್ಟ ಜಾಗದಲ್ಲಿ ಸರಿ ಅಕ್ಷರ ತುಂಬಿ–ವರ್ಣಮಾಲೆಯನ್ನು ಪೂರ್ಣಗೊಳಿಸಲಿ.**

| | | | | | | | | |
|---|---|---|---|---|---|---|---|---|
| ಅ | ಆ | ಇ | | ಉ | | ಋ | | ಏ |
| ಐ | ಒ | ಓ | | ಅಂ | | | | |

| | | | | |
|---|---|---|---|---|
| ಕ | | ಗ | ಘ | |
| | ಛ | | ಝ | ಞ |
| ಟ | ಠ | | | ಣ |
| ತ | | | ಧ | ನ |
| ಪ | | ಬ | | ಮ |

| | | | | | | | | |
|---|---|---|---|---|---|---|---|---|
| ಯ | | ಲ | ವ | ಶ | ಷ | | ಹ | |

©KTBS Not to be republished

**ಉ) ಈ ಪದಗಳನ್ನು ಓದಿಸಿರಿ.**

ಸರ, ವನ, ಮಗ, ಗಣಪ, ತಬಲ, ಬಳಪ, ಕಲರವ, ಎಡಬಲ, ಗರಗಸ, ಮಂಗನ ಆಟ, ಜನರ ಜಯ, ಉದಯದ ಸಮಯ







ಊ) ಗುಣಿತಾಕ್ಷರಗಳನ್ನು ಹೇಳುತ್ತಾ ಬರೆಯಿಸಿರಿ.

| ಉದಾ | ಕ | ಕಾ | ಕಿ | ಕೀ | ಕು | ಕೂ | ಕೃ | ಕೆ | ಕೇ | ಕೈ | ಕೊ | ಕೋ | ಕೌ | ಕಂ | ಕಃ |
|---|---|---|---|---|---|---|---|---|---|---|---|---|---|---|---|
| | ಚ | ಚಾ | ಚಿ | | | | | | | | | | | | |
| | ತ | | | | | | | | | | | | | | |
| | ಬ | | | | | | | | | | | | | | |
| | ಲ | | | | | | | | | | | | | | |

ಋ) ಈ ಪದಗಳನ್ನು ಓದಿ ನಕಲು ಮಾಡಲಿ.

ಕಾಗದ ______ ಕಿವಿ ______ ಬೀಗ ______ ಕುರಿ ______ ಊರು ______ ಗೃಹ ______

ಗೆರೆ ______ ಚೇಳು ______ ಐರಾವತ ______ ಕೊಡೆ ______ ಕೋಳಿ ______ ನೌಕೆ ______

ಕಂದ ______ ಅಂತಃಕರಣ ______

ಎ) ಈ ವಾಕ್ಯಗಳನ್ನು ಓದಿ, ನಕಲು ಮಾಡಲಿ.

೧. ಗುಲಾಬಿ ಹೂ ತುಂಬ ಸುಂದರವಾಗಿದೆ.

______________________________

೨. ನಮ್ಮ ಊರು ನಮಗೆ ಚೆಂದ.

______________________________

೩. ಕರ್ನಾಟಕದ ರಾಜಧಾನಿ ಬೆಂಗಳೂರು.

______________________________

೪. ಭಾಷೆ ಯಾವುದಾದರೇನು? ನಾವೆಲ್ಲಾ ಕನ್ನಡಿಗರು.

______________________________

©KTBS Not to be republished




# ೨. ಒತ್ತಕ್ಷರ ಕಲಿಕೆ

## ಒತ್ತಕ್ಷರ ಕಲಿಕಾ ಪಾಠ ೧

### ಜ್ಜ ಟ್ಟ ಣ್ಣ ಬ್ಬ ವ್ವ

ಅ) ಚಿತ್ರ ನೋಡಿ ಪದ ಹೇಳಿಸಿರಿ.









ಆ) ಅಕ್ಷರ ಮತ್ತು ಒತ್ತುಗಳನ್ನು ಬರೆಯುವ ಕ್ರಮ ಹೇಳಿಕೊಟ್ಟು ಉಚ್ಚರಿಸುತ್ತಾ ಬರೆಯಿಸಿರಿ.

ಜ್ಜ ಟ್ಟ ಣ್ಣ ಬ್ಬ ವ್ವ




© KTBS Not to be republished



## ಇ) ಪದಗಳನ್ನು ಓದಿ ಅಂತೆಯೇ ಬರೆಯಲು ತಿಳಿಸಿರಿ.

| | | | | |
|---|---|---|---|---|
| ಅಜ್ಜ | ಅಜ್ಜಿ | ಮಜ್ಜಿಗೆ | ಕಜ್ಜಾಯ | ಸಜ್ಜನ |
| ................ | ................ | ................ | ................ | ................ |
| ಬೆಟ್ಟ | ರಟ್ಟು | ಪಟ್ಟ | ಮೆಟ್ಟಿಲು | ತೊಟ್ಟಿಲು |
| ................ | ................ | ................ | ................ | ................ |
| ಅಣ್ಣ | ಬಣ್ಣ | ಬೆಣ್ಣೆ | ಕಣ್ಣು | ಹಣ್ಣು |
| ................ | ................ | ................ | ................ | ................ |
| ಸಣ್ಣಾಟ | ಹಣ್ಣೆಲೆ | ಸಣ್ಣಮರ | ಕೊಬ್ಬು | ಕಬ್ಬು |
| ................ | ................ | ................ | ................ | ................ |
| ಹುಬ್ಬು | ಕೊಬ್ಬರಿ | ಗೊಬ್ಬರ | ಹಬ್ಬ | ಅವ್ವ |
| ................ | ................ | ................ | ................ | ................ |
| ತೊವ್ವೆ | ಓಬವ್ವ | ನಿವ್ವಳ | ನವ್ವಾಲೆ | ಸುವ್ವಲಾಲಿ |
| ................ | ................ | ................ | ................ | ................ |

## ಈ) ಚಿತ್ರ ನೋಡಿ ಪದ ಬರೆಯಲು ತಿಳಿಸಿರಿ.

| | | | |
|---|---|---|---|
|  |  |  |  |
| _ _ _ _ _ _ | _ _ _ _ _ _ | _ _ _ _ _ _ | _ _ _ _ _ _ |
|  |  |  |  |
| _ _ _ _ _ _ | _ _ _ _ _ _ | _ _ _ _ _ _ | _ _ _ _ _ _ |

©KTBS Not to be republished





ಉ) ನೀಡಿರುವ ಪದಗಳನ್ನು ಕೆಳಗೆ ಬರೆಯಿಸಿ, ಒತ್ತಕ್ಷರಗಳಿಗೆ ಅಡಿಗೆರೆ ಹಾಕಿಸಿರಿ.

| | | | |
|---|---|---|---|
| ಗಜ್ಜರಿ | ಮೊಟ್ಟೆ | ರೊಟ್ಟಿ | ಕಬ್ಬಿಣ |
| ............... | ............... | ............... | ............... |
| ಹೆಜ್ಜೆ | ಹಬ್ಬದೂಟ | ಹೆಬ್ಬೆಟ್ಟು | ಇಟ್ಟಿಗೆ |
| ............... | ............... | ............... | ............... |
| ಅವ್ವ | ಅಣ್ಣ | ಜಟ್ಟಿ | ಸಣ್ಣ |
| ............... | ............... | ............... | ............... |

©KTBS
Not to be republished

ಊ) ವಾಕ್ಯಗಳನ್ನು ಓದಿ ನಕಲು ಮಾಡಿಸಿರಿ.

೧. ರಮಾ ಗೆಜ್ಜೆ ಕಟ್ಟಿ ಹೆಜ್ಜೆ ಹಾಕಿದಳು.

.............................................................................................

೨. ಕಿಟ್ಟು, ಪುಟ್ಟು ಪಟ್ಟಣದ ಹುಡುಗರು.

.............................................................................................

೩. ಅಣ್ಣ ಮನೆಗೆ ಸುಣ್ಣ ಬಣ್ಣ ಬಳಿದನು.

.............................................................................................







೪. ಗುಬ್ಬಿ ಡಬ್ಬದ ಕೊಬ್ಬರಿ ಮಿಠಾಯಿ ತಿಂದಿತು.

..........................................................................................................

೫. ಅವ್ವ ತೊವ್ವೆ ಮಾಡಿ ಬಡಿಸಿದಳು.

..........................................................................................................

ಖ) ಪದಗಳನ್ನು ಅನುಕ್ರಮವಾಗಿ ಜೋಡಿಸಿ, ವಾಕ್ಯ ರಚಿಸಲು ತಿಳಿಸಿರಿ.

೧. ಕೊಟ್ಟಳು ಅಜ್ಜಿ ಮಜ್ಜಿಗೆ ಕುಡಿಯಲು

..........................................................................................................

೨. ಗಾಳಿಪಟ ಬಣ್ಣದ ರಾಜಣ್ಣನು ಹಾರಿಸಿದನು

..........................................................................................................

೩. ತಿಂದರು ಮುದ್ದೆ ಅಜ್ಜ ಅಜ್ಜಿ

..........................................................................................................

©KTBS
Not to be republished



# ಒತ್ತಕ್ಷರ ಕಲಿಕಾ ಪಾಠ – ೨

## ಕ್ಕ ಗ್ಗ ಚ್ಚ ಡ್ಡ ದ್ದ ಪ್ಪ ಸ್ಸ ಳ್ಳ

ಅ) ಚಿತ್ರ ತೋರಿಸಿ – ಪದ ಹೇಳಿಸಿರಿ.



ಆ) ಅಕ್ಷರಗಳನ್ನು ಉಚ್ಚರಿಸಿ, ನಕಲು ಮಾಡಲು ತಿಳಿಸಿರಿ.

ಕ್ಕ ಗ್ಗ ಚ್ಚ ಡ್ಡ ದ್ದ ಪ್ಪ ಸ್ಸ ಳ್ಳ

.......................................................................................................

.......................................................................................................

.......................................................................................................

.......................................................................................................

©KTBS Not to be republished



### ಇ) ಪದಗಳನ್ನು ಓದಿ ಬರೆಯಲು ತಿಳಿಸಿರಿ.

| | | | | | |
|---|---|---|---|---|---|
| ಅಕ್ಕ | ಪಕ್ಕ | ಹಕ್ಕಿ | ಮಕ್ಕಳು | ಸಕ್ಕರೆ | ಅಕ್ಕರೆ |
| ................ | ................ | ................ | ................ | ................ | ................ |
| ಹಗ್ಗ | ಅಗ್ಗ | ಹಿಗ್ಗು | ಮಗ್ಗ | ಬೆಳಿಗ್ಗೆ | ತಗ್ಗಾದ |
| ................ | ................ | ................ | ................ | ................ | ................ |
| ಕುಚ್ಚು | ಲಚ್ಚಿ | ಹೆಚ್ಚು | ಮೆಚ್ಚು | ಅಚ್ಚು | ಕಲಗಚ್ಚು |
| ................ | ................ | ................ | ................ | ................ | ................ |
| ಗಡ್ಡ | ಲಡ್ಡು | ದುಡ್ಡು | ದೊಡ್ಡಣ್ಣ | ಕಡ್ಡಾಯ | ಗುಡ್ಡಗಾಡು |
| ................ | ................ | ................ | ................ | ................ | ................ |
| ಹದ್ದು | ಗದ್ದೆ | ಗದ್ದ | ಮದ್ದು | ಗುದ್ದಲಿ | ಗದ್ದಲ |
| ................ | ................ | ................ | ................ | ................ | ................ |
| ಉದ್ದಗಲ | ಅಪ್ಪ | ತುಪ್ಪ | ಸೊಪ್ಪು | ಚಿಪ್ಪು | ಹಪ್ಪಳ |
| ................ | ................ | ................ | ................ | ................ | ................ |
| ಕೊಪ್ಪಳ | ಸಪ್ಪಳ | ಬಸ್ಸು | ಹಿಸ್ಸೆ | ಹವಿಸ್ಸು | ವಯಸ್ಸು |
| ................ | ................ | ................ | ................ | ................ | ................ |
| ಮನಸ್ಸು | ಶಿರಸ್ಸು | ಆಯಸ್ಸು | ಹಳ್ಳ | ಕೊಳ್ಳ | ಬಳ್ಳಿ |
| ................ | ................ | ................ | ................ | ................ | ................ |
| ಜೊಳ್ಳು | ತಳ್ಳಾಟ | ಬೆಳ್ಳುಳ್ಳಿ | ಬಳ್ಳಾರಿ | ಪೊಳ್ಳು | ಎಳ್ಳು |
| ................ | ................ | ................ | ................ | ................ | ................ |

©KTBS
Not to be republished





ಈ) ಪದಗಳಲ್ಲಿರುವ ಒತ್ತಕ್ಷರವನ್ನು ಗುರುತಿಸಿ ಅಡಿಗೆರೆ ಎಳೆಯಲು ತಿಳಿಸಿರಿ.

ಮಾದರಿ : ಸಕ್ಕರೆ


| | | | | | |
|---|---|---|---|---|---|
| ಹಪ್ಪಳ | ಅಕ್ಕರೆ | ಕೊಪ್ಪಳ | ಮಕ್ಕಳು | ಮಗ್ಗ | ತುಪ್ಪಳ |
| ಗುಡ್ಡ | ಅಕ್ಕನಾಸರೆ | ಬಳ್ಳ | ಹಗ್ಗ | ಜಗ್ಗಾಟ | ಯಶಸ್ಸು |

ಉ) ಪದಗಳಿಗೆ ಚಿತ್ರಗಳನ್ನು ಗೆರೆ ಎಳೆದು ಹೊಂದಿಸಲಿ.

೧. ಕಪ್ಪೆ




೨. ಗುದ್ದಲಿ



೩. ತೊಟ್ಟಿಲು



೪. ಬಸ್ಸು



ಊ) ವಾಕ್ಯಗಳನ್ನು ಓದಿಸಿ ತಲಾ ಎರಡು ಬಾರಿ ನಕಲು ಮಾಡಿಸಿರಿ.

೧. ಅಕ್ಕ ಚಿಕ್ಕ ಮಕ್ಕಳಿಗೆ ಚಕ್ಕುಲಿ ಕೊಟ್ಟಳು.

..................................................................................................

..................................................................................................

©KTBS Not to be republished





೨. ರೈತನಿಗೆ ಸುಗ್ಗಿ ಬಂದರೆ ಹಿಗ್ಗು.

..............................................................................................................

..............................................................................................................

೩. ಮಕ್ಕಳು ಕಣ್ಣಾಮುಚ್ಚಾಲೆ ಆಡಿದರು.

..............................................................................................................

..............................................................................................................

೪. ಬೆಟ್ಟ ಗುಡ್ಡ ನನಗೆ ಅಚ್ಚುಮೆಚ್ಚು.

..............................................................................................................

..............................................................................................................

೫. ಸದ್ದುಗದ್ದಲದಿಂದ ನಿದ್ದೆ ಬಾರದು.

..............................................................................................................

..............................................................................................................

೬. ಮಳೆಗಾಲದಲ್ಲಿ ಹಳ್ಳಕೊಳ್ಳಗಳು ತುಂಬಿ ಹರಿದವು.

..............................................................................................................


..............................................................................................................

©KTBS Not to be republished




ಖ) ಮಾದರಿಯಂತೆ ವೃತ್ತದೊಳಗಿನ ಒತ್ತಕ್ಷರ ಬಳಸಿ ಪದ ರಚಿಸಲಿ.

ಮಾದರಿ : ಅಡ್ಡ




.........................................................
.........................................................
.........................................................
.........................................................
.........................................................
.........................................................
.........................................................
.........................................................




.........................................................
.........................................................
.........................................................
.........................................................
.........................................................
.........................................................
.........................................................

©KTBS Not to be republished



# ಒತ್ತಕ್ಷರ ಕಲಿಕಾ ಪಾಠ ೩

## ತ್ತ ನ್ನ ಮ್ಮ ಯ್ಯ ಲ್ಲ ತ್ರ

ಅ) ಚಿತ್ರ ತೋರಿಸಿ – ಪದ ಹೇಳಿಸಿರಿ.



©KTBS Not to be republished

ಆ) ಅಕ್ಷರಗಳನ್ನು ತೋರಿಸಿ ಉಚ್ಚರಿಸುತ್ತಾ ಬರೆಯಿಸಿರಿ.

ತ್ತ ನ್ನ ಮ್ಮ ಯ್ಯ ಲ್ಲ ತ್ರ

.............................................................................................

.............................................................................................

.............................................................................................

.............................................................................................



................................................................................................................

................................................................................................................

## ಇ) ಪದಗಳನ್ನು ಓದಿಸಿ ಬರೆಯಿಸಿರಿ.

| | | | | |
|---|---|---|---|---|
| ಕತ್ತೆ | ಕತ್ತು | ಗತ್ತು | ಕತ್ತಲು | ಕತ್ತರಿ |
| ................ | ................ | ................ | ................ | ................ |
| ಆಪತ್ತು | ಸಂಪತ್ತು | ಎತ್ತರ | ಹಿತ್ತಲು | ರನ್ನ |
| ................ | ................ | ................ | ................ | ................ |
| ಪೊನ್ನ | ಚನ್ನ | ಚಿನ್ನ | ಬನ್ನಿ | ಹೊನ್ನಾರು |
| ................ | ................ | ................ | ................ | ................ |
| ಕನ್ನಡ | ಮನ್ನಣೆ | ಅನ್ನಸಾರು | ಕೆನ್ನಾಲಿಗೆ | ಅಮ್ಮ |
| ................ | ................ | ................ | ................ | ................ |
| ತಿಮ್ಮ | ನಮ್ಮ | ಎಮ್ಮೆ | ಒಮ್ಮೊಮ್ಮೆ | ನಮ್ಮನಾಡು |
| ................ | ................ | ................ | ................ | ................ |
| ಅಯ್ಯ | ಒಯ್ಯು | ಅಯ್ಯಪ್ಪ | ಅಜ್ಜಯ್ಯ | ಅಪ್ಪಯ್ಯ |
| ................ | ................ | ................ | ................ | ................ |
| ತಮ್ಮಯ್ಯ | ಉಯ್ಯಾಲೆ | ಹುಲ್ಲು | ಕಲ್ಲು | ನಲ್ಲಿ |
| ................ | ................ | ................ | ................ | ................ |
| ಗಲ್ಲಿ | ಮಲ್ಲ | ಕಲ್ಲಾಟ | ಚಿಲ್ಲರೆ | ಯಲ್ಲಪ್ಪ |
| ................ | ................ | ................ | ................ | ................ |
| ಮಲ್ಲಿಗೆ | ಪುರ್‍ರನೆ | ಕರ್‍ರನೆ | ಸರ್‍ರನೆ | ಜರ್‍ರನೆ |
| ................ | ................ | ................ | ................ | ................ |

©KTBS Not to be republished





ಈ) ಅಕ್ಷರ ಆರಿಸಿ ಪದ ಪೂರ್ಣಗೊಳಿಸಲು ತಿಳಿಸಿರಿ.

೧. ಕ ......... ರಿ (ತ್ತ ದ್ದ ಮ್ಮ)

೨. ಒಮ್ಮೊ ......... (ಮ್ಮೆ ನ್ನೆ ಣ್ಣೆ)

೩. ಅ ......... ಯ್ಯ (ಜ್ಜ ಬ್ಬ ನ್ನ)

೪. ಕ ......... ಟ (ಲ್ಲಾ ನ್ನಾ ಮ್ಮಾ)

೫. ತಮ್ಮ ......... (ಯ್ಯ ನ್ನ ಟ್ಟ)

೬. ಚಿ ನ್ನ ......... (ಟ್ಟ ಮ್ಮ ಡ್ಡ)

ಉ) ವಾಕ್ಯಗಳನ್ನು ಓದಿಸಿ ತಲಾ ಎರಡು ಬಾರಿಯಂತೆ ನಕಲು ಮಾಡಿಸಿರಿ.

೧. ನಮ್ಮ ನಾಡು ಕನ್ನಡ ನಾಡು.

..................................................................................................

..................................................................................................

೨. ಶಾಲೆಯ ಸುತ್ತಮುತ್ತ ಹೂವಿನ ಗಿಡಗಳಿವೆ.

..................................................................................................

..................................................................................................

೩. ಅಪ್ಪ ನಿನ್ನೆ ಪೆನ್ನು ತಂದುಕೊಟ್ಟರು.

..................................................................................................

..................................................................................................

೪. ಹಕ್ಕಿ ಪುರ್ರನೆ ಹಾರಿತು.

..................................................................................................

..................................................................................................

©KTBS Not to be republished



೫. ನೆಲ್ಲಿಕಾಯಿ ಆರೋಗ್ಯಕ್ಕೆ ಒಳ್ಳೆಯದು.

..........................................................................................................

..........................................................................................................

**ಊ) ಈ ಪದಗಳನ್ನು ಅನುಕ್ರಮವಾಗಿ ಜೋಡಿಸಿ ಎರಡು ಬಾರಿಯಂತೆ ವಾಕ್ಯ ರಚಿಸಲಿ.**

೧. ಬಂಧುವಿಲ್ಲ ತಾಯಿಗಿಂತ ರುಚಿಯಿಲ್ಲ ಉಪ್ಪಿಗಿಂತ.

..........................................................................................................

..........................................................................................................

೨. ಉಜ್ಜಬೇಕು ಪ್ರತಿದಿನ ಹಲ್ಲುಗಳನ್ನು.

..........................................................................................................

..........................................................................................................

೩. ಆಡಿದರು ಉಯ್ಯಾಲೆ ಮಕ್ಕಳು.

..........................................................................................................

..........................................................................................................

**ಹೆಚ್ಚಿನ ಮಾಹಿತಿಗಾಗಿ:**

**ಅ) ಅರ್ಕ ಒತ್ತು (ೱ) ಇರುವ ಈ ಪದಗಳನ್ನು ಓದಿ ನಕಲು ಮಾಡಿಸಿರಿ.**

| | | | |
|---|---|---|---|
| ಸೂರ್ಯ | ಧರ್ಮ | ಪೂರ್ವ | ವಿದ್ಯಾರ್ಥಿ |
| ಸ್ಪರ್ಧೆ | ಚರ್ಚೆ | ಸೂರ್ಯಾಸ್ತ | ಪ್ರಾರ್ಥನೆ |
| ಕರ್ನಾಟಕ | ಪೂರ್ಣಚಂದ್ರ | ಸೂರ್ಯೋದಯ | |
| ...................... | ...................... | ...................... | ...................... |
| ...................... | ...................... | ...................... | ...................... |
| ...................... | ...................... | ...................... | ...................... |

©KTBS Not to be republished





ಆ) ವಾಕ್ಯಗಳನ್ನು ಓದಿಸಿ ಬರೆಯಿಸಿರಿ.

೧. ನಿರ್ಮಲ ಚಿತ್ರವನ್ನು ಬರೆದಳು.

.......................................................................................................

.......................................................................................................

೨. ಹಾಲು ಒಂದು ಸಂಪೂರ್ಣ ಆಹಾರ.

.......................................................................................................

.......................................................................................................

೩. ನಮ್ಮ ರಾಜ್ಯ ಕರ್ನಾಟಕ.

.......................................................................................................

.......................................................................................................

ಇ) ಕೆಳಗಿನ ಪದಗಳನ್ನು ಓದಿಸಿ ಬರೆಯಿಸಿರಿ.

| | | | |
|---|---|---|---|
| ಸ್ವರ್ಗ | ಸ್ವರ್ಣ | ಜ್ವಾಲೆ | ಸ್ವಾತಿ |
| ಪ್ರಪಂಚ | ಶ್ವಾನ | ರಕ್ಷಾಬಂಧನ | ಆಸ್ಥಾನ |
| ರಾಕ್ಷಸ | ಉದ್ಭವ | ಅದ್ಭುತ | ಗುಚ್ಛ |
| ಸಂಭ್ರಮ | ಶಾಸ್ತ್ರ | ನಿಷ್ಠೆ | ಸ್ವರಾಜ್ಯ |
| ಈಶಾನ್ಯ | ಮಾಲಿನ್ಯ | ವಜ್ರ | ಉದ್ಯೋಗ |

.......................................................................................................

.......................................................................................................

.......................................................................................................

.......................................................................................................

.......................................................................................................

©KTBS Not to be republished

ಈ) ಒತ್ತಕ್ಷರಗಳನ್ನು ಓದಿಸಿ ಬರೆಯಿಸಿರಿ.

| | | | | |
|---|---|---|---|---|
| ಕ್ಕ | ಖ್ಖ | ಗ್ಗ | | ಙ್ಙ |
| ಚ್ಚ | | ಜ್ಜ | | ಞ್ಞ |
| ಟ್ಟ | ಠ್ಠ | ಡ್ಡ | | ಣ್ಣ |
| ತ್ತ | | ದ್ದ | ಧ್ಧ | ನ್ನ |
| ಪ್ಪ | | ಬ್ಬ | | ಮ್ಮ |

| | | | | | | | | |
|---|---|---|---|---|---|---|---|---|
| ಯ್ಯ | | ಲ್ಲ | ವ್ವ | ಶ್ಶ | | | ಹ್ಹ | ಳ್ಳ |

©KTBS
Not to be republished

ಉ) ಒತ್ತಕ್ಷರಗಳನ್ನು ಕ್ರಮವಾಗಿ ಬರೆಯಿಸಿರಿ.

| | | | | |
|---|---|---|---|---|
| ಕ್ಕ | ಖ್ಖ | | | |
| | | | | |
| | | | | |
| | | | | |
| | | | | |

| | | | | | | | | |
|---|---|---|---|---|---|---|---|---|
| | | | | | | | | |



# ಘಟಕ ಮೌಲ್ಯಮಾಪನ

ಅ) ಒತ್ತಕ್ಷರಗಳನ್ನು ಓದಿಸಿ ಬರೆಯಿಸಿರಿ.

| | | | | | | |
|---|---|---|---|---|---|---|
| ಟ್ಟ | ಣ್ಣ | ವ್ವ | ಬ್ಬ | ಜ್ಜ | ಗ್ಗ | ದ್ದ |
| ಳ್ಳ | ಕ್ಕ | ಚ್ಚ | ಪ್ಪ | ಡ್ಡ | ಸ್ಸ | ತ್ತ |
| ರ್ರ | ನ್ನ | ಮ್ಮ | ಯ್ಯ | ಲ್ಲ | | |

ಆ) ಒತ್ತಕ್ಷರಗಳನ್ನು ಓದಿಸಿ ಚಿತ್ರ ತೋರಿಸಿ ಪದ ಬರೆಯಿಸಿರಿ.

| | | |
|---|---|---|
| ಪ್ಪ | ........................ |  |
| ಬ್ಬ | ........................ |  |
| ಣ್ಣ | ........................ |  |
| ಟ್ಟ | ........................ |  |
| ಕ್ಕ | ........................ |  |
| ಸ್ಸ | ........................ |  |

©KTBS Not to be republished





## ಇ) ಬಿಟ್ಟ ಜಾಗವನ್ನು ಸೂಕ್ತ ಒತ್ತಕ್ಷರದಿಂದ ತುಂಬಿಸಿ ಓದಲು ತಿಳಿಸಿರಿ.

೧. ಅ........ಹಾಸ

೨. ಸ........ಮರ

೩. ಹ........ದೂಟ

೪. ಗು........ಗಾಡು

೫. ಮ........ಳು

೬. ಗು........ಲಿ

## ಈ) ಮಾದರಿಯಂತೆ ಒತ್ತಕ್ಷರ ಬರುವ ಪದಗಳನ್ನು ರಚಿಸಲು ತಿಳಿಸಿರಿ.

ಮಾದರಿ : ಮ್ಮ – ಅಮ್ಮ, ತಮ್ಮ, ಮಮ್ಮಲ, ತಮ್ಮಣ್ಣ

ನ್ನ ________ ________ ________ ________

ಕ್ಕ ________ ________ ________ ________

ದ್ದ ________ ________ ________ ________

ಪ್ಪ ________ ________ ________ ________

ಸ್ಸ ________ ________ ________ ________

ಜ್ಜ ________ ________ ________ ________

©KTBS Not to be republished





# ೩. ಚಿಟ್ಟೆ (ಪದ್ಯ)

ಚಿಟ್ಟೆ ಚಿಟ್ಟೆ
ಚಂದದ ಚಿಟ್ಟೆ
ಕೊಟ್ಟವರ್‍ಯಾರೇ
ಬಣ್ಣದ ಬಟ್ಟೆ?

ಮುಟ್ಟಲು ಬಂದರೆ
ತಟ್ಟನೆ ಹಾರಿ
ದೂರಕೆ ಓಡುವೆ
ಏತಕೆ ಪೋರಿ?



ಸುಮ್ಮನೆ ನನ್ನಲಿ
ತೋರುವೆ ಸಿಟ್ಟು
ಹೂವಿನ ಹತ್ತಿರ
ಏನದು ಗುಟ್ಟು

ಬಾ ಬಾ ಒಳಗೆ
ಕೊಡುವೆನು ನಾನು
ಬಿಸಿ ಬಿಸಿ ದೋಸೆ
ಸಿಹಿ ಸಿಹಿ ಜೇನು

– ಡಾ. ಪಿ ನಾರಾಯಣ ಭಟ್

©KTBS
Not to be republished



**ಕ್ಷೇತ್ರ** – **ಆಲಿಸುವುದು**

**ಸಾಮರ್ಥ್ಯ** – **ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗೀತೆ ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು.**

## ಕವಿ–ಕೃತಿ ಕುರಿತು

ಪಿ. ನಾರಾಯಣ ಭಟ್ ಅವರು ಕೊಡಗು ಜಿಲ್ಲೆಯ ರಾಜೆ ಗ್ರಾಮದವರು. ಶಿವಮೊಗ್ಗದಲ್ಲಿ ದಂತ ವೈದ್ಯಕೀಯ ವೃತ್ತಿಯಲ್ಲಿ ಇದ್ದು, ಈಗ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಚಿಲಿಪಿಲಿಗುಟ್ಟುವ ಚಿಣ್ಣರಿಗೆ, ಪುಟ್ಟಾಣಿ ಪದ್ಯಗಳು, 'ಚಿನ್ನದ ಚೆಂಡು,

'ಬಣ್ಣದ ಬಲೂನು' – ಇವು ಮಕ್ಕಳಿಗಾಗಿ ಬರೆದ ಕವನ ಸಂಕಲನಗಳು. 'ಭಾರತಿಗೆ ಆರತಿ' ಎಂಬುದು ಇವರ ದೇಶಭಕ್ತಿಗೀತೆಗಳ ಸಂಕಲನ. ಇವರ 'ಪುಟಾಣಿ ಪದ್ಯಗಳು' ಎಂಬ ಕವನ ಸಂಕಲನದಿಂದ ಪ್ರಸ್ತುತ ಪದ್ಯವನ್ನು ಆರಿಸಲಾಗಿದೆ.

## ಅರ್ಥ ತಿಳಿಯಿರಿ.

ತಟ್ಟನೆ – ಕೂಡಲೆ; ಪೋರಿ – ತುಂಟಿ; ಸುಮ್ಮನೆ – ಕಾರಣವಿಲ್ಲದೆ; ತೋರುವೆ – ಕಾಣಿಸುವೆ; ಗುಟ್ಟು – ರಹಸ್ಯ

## ಅಭ್ಯಾಸ

### ಅ) ಈ ಕೆಳಗಿನ ಪ್ರಾಸ ಪದಗಳನ್ನು ಓದಿರಿ.

೧. ಚಿಟ್ಟೆ – ಬಟ್ಟೆ

೨. ಹಾರಿ – ಪೋರಿ

೩. ಸಿಟ್ಟು – ಗುಟ್ಟು

೪. ನಾನು – ಜೇನು

©KTBS Not to be republished



ಆ) ಪದ್ಯದಲ್ಲಿ ಬಿಟ್ಟಿರುವ ಪದಗಳನ್ನು ಬರೆಯಿರಿ.

ಮುಟ್ಟಲು ..................

........................ ಹಾರಿ

ದೂರಕೆ ....................

.................... ಪೋರಿ.

ಸುಮ್ಮನೆ .....................

.......................... ಸಿಟ್ಟು

.......................... ಹತ್ತಿರ

......................... ಗುಟ್ಟು

ಇ) ಈ ಕೆಳಗಿನ ಪದಗಳನ್ನು ಓದಿರಿ ಮತ್ತು ಬರೆಯಿರಿ.

೧. ಚೆಂದದ ಚಿಟ್ಟೆ : ..........................................................

೨. ಕೊಟ್ಟವರ್‍ಯಾರೇ ಬಣ್ಣದ ಬಟ್ಟೆ : ....................................................

೩. ಬಿಸಿ ಬಿಸಿ ದೋಸೆ : ..........................................................

ಈ) ಕೊಟ್ಟಿರುವ ಪದಗಳನ್ನು ಓದಿ ನಕಲು ಮಾಡಿರಿ.

| ಸಿಹಿಸಿಹಿ | ಬಿಸಿಬಿಸಿ | ರುಚಿರುಚಿ | ಫಳಫಳ | ಘಮಘಮ |
|---|---|---|---|---|
| | | | | |
| ಛಟಛಟನೆ | ಲಟಲಟನೆ | ಪಟಪಟನೆ | ಗಬಗಬನೆ | ಝುಗಝುಗನೆ |
| | | | | |

©KTBS Not to be republished

ಉ) ಈ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಿರಿ.

೧. ಮುಟ್ಟಲು ಬಂದರೆ ಚಿಟ್ಟೆ ಏನು ಮಾಡುತ್ತದೆ?

೨. ಚಿಟ್ಟೆ ಯಾರಿಗೆ ಗುಟ್ಟನ್ನು ಹೇಳುತ್ತದೆ?

೩. ಚಿಟ್ಟೆಗೆ ಏನು ಕೊಡುವೆನೆಂದು ಕವಿ ಹೇಳುವರು?

## ಭಾಷಾ ಚಟುವಟಿಕೆ

ಅ) ಈ ಕೆಳಗಿನ ಚಿತ್ರಕ್ಕೆ ಸೂಕ್ತವಾದ ಬಣ್ಣ ತುಂಬಿರಿ.



## ಯೋಜನೆ

೧. ಚಿಟ್ಟೆಗಳ ಚಿತ್ರ ಸಂಗ್ರಹಿಸಿ ಕೋಶ ತಯಾರಿಸಿರಿ.

### ಶುಭನುಡಿ

* ಗಿಡಮರ, ಪ್ರಾಣಿಪಕ್ಷಿಗಳನ್ನು ಪ್ರೀತಿಸಬೇಕು.
* ಪ್ರಕೃತಿ ಸೌಂದರ್ಯ ಮನಸ್ಸಿಗೆ ಮುದ ನೀಡುತ್ತದೆ.
* ಯಾವ ಜೀವಿಗೂ ಹಿಂಸೆ ಮಾಡಬಾರದು.

©KTBS Not to be republished

# ೪. ಮೆದುಮಾತು

ವ್ಯಾಪಾರಿಯೊಬ್ಬ ಸಂತೆಗೆಂದು ಸಾಮಾನುಗಳನ್ನು ಟೆಂಪೋದಲ್ಲಿ ತುಂಬಿಕೊಂಡು ಹೊರಟಿದ್ದನು. ಮಳೆ ಬಂದು ರಸ್ತೆ ಬಲು ಕೆಟ್ಟು ಹೋಗಿತ್ತು. ಮಾರ್ಗ ಮಧ್ಯದ ಕೆಸರಿನಲ್ಲಿ ಟೆಂಪೋದ ಒಂದು ಚಕ್ರವು ಹೂತು ಹೋಯಿತು. ವ್ಯಾಪಾರಿ ಟೆಂಪೋದಿಂದ ಕೆಳಗಿಳಿದು ಯಾರಾದರೂ ಇತ್ತ ಬರುವರೇ ಎಂದು ನೋಡಿದನು. ದೂರದಲ್ಲಿ ಒಬ್ಬ ಯುವಕ ಹೋಗುತ್ತಿದ್ದ. ವ್ಯಾಪಾರಿ ಗಟ್ಟಿಯಾಗಿ "ಲೋ, ಬಾರೋ ಈ ಕಡೆ" ಎಂದನು.



'ಯಾರಪ್ಪ ನನ್ನನ್ನು ಈ ಥರ ಕರೆಯೋದು?' ಎಂದುಕೊಂಡು ಯುವಕ ತಿರುಗಿ ನೋಡಿದ. ವ್ಯಾಪಾರಿ ದರ್ಪದಿಂದ "ಏನೋ, ಹಾಗೆ ನೋಡ್ತೀಯಾ? ಚಕ್ರ ಹೂತು ಹೋಗಿರೋದು ಕಾಣಿಸೋದಿಲ್ವೆ? ಬಾ, ಸ್ವಲ್ಪ ಚಕ್ರ ಎತ್ತು. ನಾನು ಗಾಡಿ ಚಾಲು ಮಾಡ್ತೇನೆ" ಎನ್ನುತ್ತ ಟೆಂಪೋ ಹತ್ತಿದನು. ಆತನ ಮಾತಿನ ಧಾಟಿ ಯುವಕನಿಗೆ ಹಿಡಿಸಲಿಲ್ಲ.

ಆತ ಸಿಟ್ಟಿನಿಂದ, "ನೀನೇ ಎತ್ತಿಕೋ, ನಾನೇಕೆ ಎತ್ತಲಿ?" ಎನ್ನುತ್ತ ಮುಂದಕ್ಕೆ ನಡೆದನು.

ಆ ದಾರಿಯಲ್ಲಿ ಬರುತ್ತಿದ್ದ ರಾಮಪ್ಪ ಮಾಸ್ತರರು ಇವರಿಬ್ಬರ ಮಾತುಗಳನ್ನು ಆಲಿಸಿ, ವ್ಯಾಪಾರಿಗೆ ಹೇಳಿದರು : "ನೋಡ್ರಿ ಯಜಮಾನರೇ, ಯಾರೇ ಆಗಲಿ ಗೌರವ

©KTBS Not to be republished

ಕೊಟ್ಟು ಮಾತನಾಡಿಸಬೇಕು. ಆ ಹುಡುಗನನ್ನು ಮಾತನಾಡಿಸಿದ ರೀತಿ ಸರಿ ಎಂದು ಅನಿಸುತ್ತಿದೆಯೇ ನಿಮಗೆ? ಅವನನ್ನು ಪ್ರೀತಿಯಿಂದ ಮಾತನಾಡಿಸಿರಿ, ಆಗ ನಿಮ್ಮ ಕೆಲಸಕ್ಕೆ ಆತ ಸಹಾಯ ಮಾಡೇ ಮಾಡ್ತಾನೆ” ಎಂದರು.



ಮಾಸ್ತರ್ ಹೇಳಿದ ಮಾತಿನಿಂದ ವ್ಯಾಪಾರಿಗೆ ತಪ್ಪಿನ ಅರಿವಾಯಿತು. ಆತ ಯುವಕನಿಗೆ, “ತಮ್ಮಾ, ದಯಮಾಡಿ ಕ್ಷಮಿಸು, ಟೆಂಪೋದ ಚಕ್ರ ಎತ್ತಲು ಸಹಾಯ ಮಾಡುವೆಯಾ?” ಎಂದು ಕೇಳಿಕೊಂಡ. ಅಷ್ಟರಲ್ಲಿ ಮಾಸ್ತರರು “ಈ ಮಾತನ್ನು ಮೊದಲೇ ಹೇಳಬಹುದಿತ್ತಲ್ಲ? ಬಾಪ್ಪ ಗೆಳೆಯ, ಇವರಿಗೆ ಸ್ವಲ್ಪ ಸಹಾಯ ಮಾಡೋಣ” ಎನ್ನುತ್ತ ಯುವಕನನ್ನು ಕರೆದು, ತಾವೂ ಮುಂದೆ ಬಂದರು.

ಯುವಕನೂ ಮಾಸ್ತರರೂ ಸೇರಿಕೊಂಡು ವ್ಯಾಪಾರಿಯ ಟೆಂಪೋದ ಚಕ್ರವನ್ನು ಮೇಲಕ್ಕೆತ್ತಿದರು. ಮಾಸ್ತರರ ಮಾತಿನಲ್ಲಿದ್ದ ಆತ್ಮೀಯತೆ ಎಲ್ಲರ ಮನಸ್ಸನ್ನು ಗೆದ್ದಿತು. ವ್ಯಾಪಾರಿಯು ಟೆಂಪೋವನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ ಕೆಳಗಿಳಿದು ಬಂದು ಯುವಕನ ಕೈಕುಲುಕಿದನು. ಮಾಸ್ತರರಿಗೆ ಧನ್ಯವಾದ ಹೇಳಿದನು.

**ಕ್ಷೇತ್ರ – ಮಾತನಾಡುವುದು**

**ಸಾಮರ್ಥ್ಯ – ವಿನಯಪೂರ್ವಕವಾಗಿ ಮಾತನಾಡುವುದು.**

©KTBS Not to be republished



**ಅರ್ಥ ತಿಳಿಯಿರಿ.**

ವ್ಯಾಪಾರಿ – ವರ್ತಕ; ಬಲು – ಬಹಳ; ಧಾಟಿ – ರೀತಿ ; ಚಕ್ರ – ಗಾಲಿ; ಚಾಲು – ಆರಂಭ (ಚಲಾವಣೆ); ಮಾಸ್ತರರು – ಶಿಕ್ಷಕರು

**ವಿವರ ತಿಳಿಯಿರಿ.**

ಸಂತೆ – ಕೊಡು ಕೊಳ್ಳುವುದಕ್ಕಾಗಿ ಸೇರುವ ಜನರ ಗುಂಪು

ಟೆಂಪೋ – ಸರಕು ಸಾಗಾಣಿಕೆಯ ವಾಹನ

ಹೂತುಹೋಗು – ಕೆಸರು, ಒದ್ದೆಮಣ್ಣು ಅಥವಾ ಮರಳಿನಲ್ಲಿ ಸಿಲುಕಿಕೊಳ್ಳುವುದು.

## ಅಭ್ಯಾಸ

**ಅ) ಖಾಲಿ ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.**

೧. ಮಳೆ ಬಂದು .......................... ಬಲು ಕೆಟ್ಟು ಹೋಗಿತ್ತು.

೨. ದೂರದಲ್ಲಿ ಒಬ್ಬ .......................... ಹೋಗುತ್ತಿದ್ದ.

೩. ಇವರಿಗೆ ಸ್ವಲ್ಪ .......................... ಮಾಡೋಣ.

೪. ಮಾಸ್ತರರಿಗೆ .......................... ಹೇಳಿದರು.

**ಆ) ಕೊಟ್ಟಿರುವ ಮಾತುಗಳನ್ನು ಯಾರು ಹೇಳಿದರು? ಯಾರಿಗೆ ಹೇಳಿದರು?**

೧. "ಚಕ್ರ ಹೂತು ಹೋಗಿರೋದು ಕಾಣಿಸೋದಿಲ್ವೆ?"

ಯಾರು ಹೇಳಿದರು? ..........................................................

ಯಾರಿಗೆ ಹೇಳಿದರು? ..........................................................

೨. "ನೀನೇ ಎತ್ತಿಕೋ, ನಾನೇಕೆ ಎತ್ತಲಿ?"

ಯಾರು ಹೇಳಿದರು? ..........................................................

ಯಾರಿಗೆ ಹೇಳಿದರು? ..........................................................

೩. "ಅವನನ್ನು ಪ್ರೀತಿಯಿಂದ ಮಾತನಾಡಿಸಿರಿ"

ಯಾರು ಹೇಳಿದರು? ..........................................................

ಯಾರಿಗೆ ಹೇಳಿದರು? ..........................................................

©KTBS Not to be republished





**ಇ) ಕೂಡಿಸಿ ಬರೆಯಿರಿ.**

ಮಾದರಿ : ಕ್ + ಆ = ಕಾ

೧) ಚ್ + ಆ = ...........

೨) ಟ್ + ಆ = ...........

೩) ತ್ + ಆ = ...........

೪) ಪ್ + ಆ = ...........

**ಈ) ಮಾದರಿಯಂತೆ ಬರೆಯಿರಿ.**

ಮಾದರಿ : ಮಾಡ್ತೇನೆ – ಮಾಡುತ್ತೇನೆ

೧) ಕರೆಯೋದು – ...............................

೨) ನೋಡ್ತೀಯಾ – ...............................

೩) ಹೋಗ್ತೇನೆ – ...............................

೪) ಬರ್ತೇನೆ – ...............................

**ಉ) ಕೊಟ್ಟಿರುವ ಪದಗಳನ್ನು ಅಂದವಾಗಿ ನಕಲು ಮಾಡಿರಿ.**

೧. ಕೈಕುಲುಕು : ........................................

೨. ಧನ್ಯವಾದ : ........................................

೩. ಕ್ಷಮಿಸು : ........................................

**ಊ) ಒಂದು ಪದ / ವಾಕ್ಯದಲ್ಲಿ ಉತ್ತರಿಸಿರಿ.**

೧. ವ್ಯಾಪಾರಿಯು ಎಲ್ಲಿಗೆ ಹೊರಟಿದ್ದನು?

..........................................................................................................

©KTBS
Not to be republished







೨. ವ್ಯಾಪಾರಿಯು ಯುವಕನನ್ನು ಏನೆಂದು ಕೂಗಿದನು?

................................................................................................

೩. ಯುವಕನು ಸಿಟ್ಟಿನಿಂದ ವ್ಯಾಪಾರಿಗೆ ಏನೆಂದು ಹೇಳಿದನು?

................................................................................................

೪. ಮಾಸ್ತರರ ಮಾತಿನಲ್ಲಿದ್ದ ಆತ್ಮೀಯತೆ ಏನನ್ನು ಗೆದ್ದಿತು?

................................................................................................

## ಭಾಷಾ ಚಟುವಟಿಕೆ

**ಅ) ಒಳ್ಳೆಯ ಅಭ್ಯಾಸಗಳನ್ನು 'ಸರಿ ಚಿಹ್ನೆ' ☑ ಯಿಂದ ಕೆಟ್ಟ ಅಭ್ಯಾಸವನ್ನು ☒ ಚಿಹ್ನೆಯಿಂದ ಗುರುತಿಸಿರಿ.**

೧. "ಶಾಲೆಗೆ ಸರಿಯಾದ ಸಮಯಕ್ಕೆ ಬರಬೇಕು" ........................

೨. "ಗಿಡಮರಗಳನ್ನು ಕತ್ತರಿಸಬೇಕು" ........................

೩. "ಗೆಳೆಯರೊಂದಿಗೆ ಜಗಳವಾಡಬಾರದು" ........................

೪. "ವಾರಕ್ಕೊಮ್ಮೆ ಉಗುರು ಕತ್ತರಿಸಬಾರದು" ........................

೫. "ಯಾವಾಗಲೂ ಸತ್ಯವನ್ನೇ ಹೇಳಬೇಕು" ........................

೬. "ಗುರುಹಿರಿಯರನ್ನು ಗೌರವಿಸಬೇಕು" ........................

## ಯೋಜನೆ

**ಅ) ಪ್ರವಾಸ ಹೋಗಲು ತಂದೆಯ ಬಳಿ ಹಣ ಕೇಳುವ ಸನ್ನಿವೇಶವನ್ನು ಕುರಿತು ಸಂಭಾಷಣೆ ಬರೆಯಿರಿ. (ಶಿಕ್ಷಕರ ಸಹಕಾರದೊಂದಿಗೆ)**

### ಶುಭನುಡಿ

* ನಾಲಿಗೆ ಒಳ್ಳೆಯದಾದರೆ ನಾಡೇ ಒಳ್ಳೆಯದು.
* ಮೃದುಮಾತು ಹೃದಯವನ್ನು ಗೆಲ್ಲುತ್ತದೆ.
* ದುಡುಕಿನ ಮಾತು ಕೆಡುಕಿನ ಮೂಲ.

©KTBS Not to be republished



# ೫. ಅಕ್ಟೋಬರ್ ಎರಡು (ಪದ್ಯ)



ಅಕ್ಟೋಬರಿನ ಎರಡನೆ ದಿನವು
ಗಾಂಧಿ ಜಯಂತಿಯು ಅಂದು
ಬನ್ನಿರಿ ಎಲ್ಲರು ಕೂಡಿ ಹಾಡುವಾ
ಅವರನು ನೆನಪಿಗೆ ತಂದು

ಸಣಕಲು ದೇಹದ, ಗಾಂಧೀಜಿಗೆ
ಸತ್ಯ – ಅಹಿಂಸೆಯೆ ಆಧಾರ
ಇವುಗಳ ಎದುರು ನಡೆಯದಾಯಿತು
ಆಂಗ್ಲರ ಆಳಿಕೆ ದರಬಾರ

ಅನೀತಿ ದಾರಿ ತುಳಿಯಲೆ ಇಲ್ಲ
ನುಡಿಯಲೆ ಇಲ್ಲ ಹುಸಿಯನ್ನು
ಪ್ರಾಣ ಹೋದರೂ ಲೆಕ್ಕಿಸಲಿಲ್ಲ
ಬಾಗಲೇ ಇಲ್ಲ ತಲೆಯನ್ನು

ಶ್ರಮದ ಪಾಠವ ದೇಶಕೆ ಕಲಿಸಿ
ಒಳ್ಳೆಯ ದಾರಿ ತೋರಿದರು
ಉಚ್ಚ – ನೀಚ ಭಾವವ ಅಳಿಸಿ
ಮಧುರ ಪ್ರೀತಿಯ ಬೀರಿದರು



–ಗುರುರಾಜ ಬೆಣಕಲ್

©KTBS
Not to be republished



**ಕ್ಷೇತ್ರ** – **ಆಲಿಸುವುದು**

**ಸಾಮರ್ಥ್ಯ** – **ಪದ್ಯದಲ್ಲಿನ ಸರಳ ಮಾಹಿತಿಯನ್ನು ಅನುಕ್ರಮವಾಗಿ ನೆನಪಿಸಿಕೊಳ್ಳುವುದು.**

**ಕವಿ–ಕೃತಿ ಕುರಿತು**

ಬಾಗಲಕೋಟೆಯಲ್ಲಿ ೧೯೪೭ರಲ್ಲಿ ಜನಿಸಿದ ಗುರುರಾಜ ಬೆಣಕಲ್ ಅವರು ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತರಾದವರು. ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಇವರು ಮಕ್ಕಳ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು. 'ಚಿನ್ನಾರಿ', 'ಒಗಟು ಬಿಡಿಸೊ ಬುದ್ಧಿ ಬೆಳೆಸೊ', 'ಅನ್ನ– ಜೇನು', 'ಸಂತಸ ನೀಡುವ ಹೂಗಳು' ಇತ್ಯಾದಿ ಕವನ ಸಂಕಲನಗಳು ಪ್ರಮುಖವಾದವು.

ಪ್ರಸ್ತುತ ಕವನವನ್ನು ಇವರ 'ಹಾಡುಹಕ್ಕಿ ಓಡು ಬಾರೆ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಅರ್ಥ ತಿಳಿಯಿರಿ**

ಸಣಕಲು – ಸೊರಗಿದ; ದರಬಾರ – ಸಭಾಸ್ಥಾನ; ಅಹಿಂಸೆ – ಪೀಡಿಸದಿರುವಿಕೆ; ಆಧಾರ – ಆಶ್ರಯ, ಮೂಲ; ಅನೀತಿ – ಅನ್ಯಾಯ; ಹುಸಿ – ಸುಳ್ಳು, ಅಸತ್ಯ; ಉಚ್ಚ – ಉನ್ನತ, ಎತ್ತರದ; ನೀಚ–ಕೆಳಮಟ್ಟದ; ಮಧುರ – ಸಿಹಿಯಾದ, ಮನೋಹರ.




**ಅ) ಕೊಟ್ಟಿರುವ ಪದಗಳಲ್ಲಿ ಸರಿಯಾದ ಪದ ಆರಿಸಿ, ಬಿಟ್ಟ ಸ್ಥಳಗಳನ್ನು ತುಂಬಿರಿ.**

೧. ಬನ್ನಿರಿ ಎಲ್ಲರೂ .................. ಹಾಡುವಾ.

ಅ) ಹಾಡಿ ಆ) ಕೂಡಿ ಇ) ಮಾಡಿ ಈ) ನೋಡಿ

೨. ಬಾಗಲೇ ಇಲ್ಲ .....................

ಅ) ಕೈಯನ್ನು ಆ) ಮೈಯನ್ನು ಇ) ತಲೆಯನ್ನು ಈ) ಬೆಲೆಯನ್ನು

೩. ಶ್ರಮದ ...................... ದೇಶಕೆ ಕಲಿಸಿ

ಅ) ಪಾಠವ ಆ) ನೋಟವ ಇ) ಶಕ್ತಿಯ ಈ) ಪ್ರೀತಿಯ

©KTBS Not to be republished





**ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಗಾಂಧಿ ಜಯಂತಿಯನ್ನು ಎಂದು ಆಚರಿಸಲಾಗುತ್ತದೆ?

.......................................................................................................

೨. ಗಾಂಧೀಜಿಯವರಿಗೆ ಯಾವುದು ಆಧಾರವಾಗಿತ್ತು?

.......................................................................................................

೩. ಗಾಂಧೀಜಿಯವರು ಯಾವ ದಾರಿಯನ್ನು ತುಳಿಯಲಿಲ್ಲ?

.......................................................................................................

೪. ಗಾಂಧೀಜಿಯವರು ಮಧುರ ಪ್ರೀತಿಯನ್ನು ಹೇಗೆ ಬೀರಿದರು?

.......................................................................................................

**ಇ) ಕೆಳಗಿನ ಪ್ರಾಸ ಪದಗಳನ್ನು ಜೋಡಿಸಿ ಬರೆಯಿರಿ.**

| | | |
|---|---|---|
| ಹುಸಿಯನ್ನು | ಅಂದು | ತೋರಿದರು |
| ತಲೆಯನ್ನು | ಬೀರಿದರು | ತಂದು |

....................–..........................

....................–..........................

....................–..........................

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

**ಮಾದರಿ :** ನ್ಯಾಯ x ಅನ್ಯಾಯ

ನೀತಿ x ....................

ಹಿಂಸೆ x ....................

ಸತ್ಯ x ....................

ಧರ್ಮ x ....................

Not to be republished ©KTBS







ಉ) ಮಾದರಿಯಂತೆ ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ವಾಕ್ಯ ರಚಿಸಿರಿ.

ಮಾದರಿ : ಶ್ರಮ : ನಾವು ಶ್ರಮವಹಿಸಿ ದುಡಿಯಬೇಕು.

೧. ಪ್ರೀತಿ : ..........................................................................................

೨. ನೆನಪು : ........................................................................................

೩. ಸತ್ಯ : ...........................................................................................

ಊ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | ಬ | |
|---|---|---|
| ೧. ಸಣಕಲು | ಅ) ಆಳಿಕೆ | ೧ ............................................ |
| ೨. ಮಧುರ | ಆ) ನೀಚ | ೨ ............................................ |
| ೩. ಆಂಗ್ಲರ | ಇ) ದೇಹ | ೩ ............................................ |
| ೪. ಉಚ್ಚ | ಈ) ಪ್ರೀತಿ | ೪ ............................................ |




ಅ) ಮಾದರಿಯಂತೆ ಕೆಳಗಿನ ಪದಗಳಲ್ಲಿರುವ ಸ್ವರಾಕ್ಷರಗಳನ್ನು ಗುರುತಿಸಿ ವೃತ್ತ ಹಾಕಿರಿ.

ಮಾದರಿ : (ಅ) ಹಿಂಸೆ

| | | |
|---|---|---|
| ೧. ಉಚ್ಚ | ೨. ಆಂಗ್ಲರು | ೩. ಎಲ್ಲರು |
| ೪. ಒಳ್ಳೆಯ | ೫. ಈಶ್ವರ | ೬. ಋಷಿ |

ಆ) ಕೆಳಗಿನವುಗಳಲ್ಲಿ ಅನುಸ್ವಾರವಿರುವ ಪದಗಳನ್ನು ಆಯ್ದು ಬರೆಯಿರಿ.

| ಗಾಂಧೀಜಿ | ದೇಶ | ತಾಯಿ | ಆಂಗ್ಲರು | ತಂದು |
|---|---|---|---|---|
| .............. | .............. | .............. | .............. | .............. |

ಇ) ಉದಾಹರಣೆಯೊಂದಿಗೆ ಕೊಟ್ಟಿರುವ ಪದಗಳನ್ನು ಬರೆಯಿರಿ.

ಉದಾ : ಮರ – ಮರಗಳು

ದಿನ – .................................... ಪುಸ್ತಕ – ....................................

ತಲೆ – .................................... ಪಾಠ – ....................................

©KTBS Not to be republished



ಈ) ಕೊಟ್ಟಿರುವ ಚಿತ್ರಗಳಲ್ಲಿರುವವರನ್ನು ಗುರುತಿಸಿ ಹೆಸರು ಬರೆಯಿರಿ.





.................................... .................................... ....................................

ಉ) ನಿಮ್ಮ ಶಾಲೆಯಲ್ಲಿ ಆಚರಿಸುವ ದಿನಾಚರಣೆಗಳನ್ನು ಪಟ್ಟಿ ಮಾಡಿರಿ.

ಉದಾ : ಗಾಂಧಿ ಜಯಂತಿ

೧ ................................................ ೨ ................................................

೩ ................................................ ೪ ................................................

೫ ................................................ ೬ ................................................

## ಯೋಜನೆ

ಅ) ನಿಮಗೆ ತಿಳಿದಿರುವ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರಕೋಶ ತಯಾರಿಸಿರಿ.

### ಶುಭನುಡಿ

* ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ
* ತಾಳಿದವನು ಬಾಳಿಯಾನು
* ನಾಡು ನುಡಿಗಾಗಿ ಮಿಡಿಯಬೇಕು.

©KTBS Not to be republished




## ೬. ಕಾಗದದ ದೋಣಿ

(ಅಫ್ರಿನ್ ಮತ್ತು ಮೇರಿ ಕಾಗದದ ದೋಣಿ ಮಾಡುವುದನ್ನು ಕಲಿತುಕೊಳ್ಳಲು ಪಕ್ಕದ ಮನೆಯ ಮಾಮನ ಬಳಿ ಬಂದರು.)

**ಮಾಮ** : ಓಹ್! ಮಕ್ಕಳೇ ಬನ್ನಿ ಬನ್ನಿ. ನಾನು ನಿಮಗಾಗಿ ಕಾಯುತ್ತಾ ಇದ್ದೆ.

**ಅಫ್ರಿನ್** : ಕ್ಷಮಿಸಿ ಮಾಮ, ನಾವು ಕತ್ತರಿ ಹುಡುಕಿ ತುಂಬಾ ಹೊತ್ತು ಹಾಳು ಮಾಡಿದೆವು ಕೊನೆಗೂ ಸಿಗಲೇ ಇಲ್ಲ.




©KTBS
Not to be republished





**ಮಾಮ** : ಪರವಾಗಿಲ್ಲ, ನನ್ನ ಬಳಿ ಇದೆ ಕೊಡುತ್ತೇನೆ.

**ಮೇರಿ** : ಅಬ್ಬ! ಈಗ ಸಮಾಧಾನವಾಯ್ತು ಮಾಮ. ನಾವು ಕಾಗದ, ಅಂಟು ತಂದಿದ್ದೇವೆ. ದೋಣಿ ಮಾಡಲು ತುಂಬಾ ಕಾತರದಿಂದಿದ್ದೇವೆ.

**ಮಾಮ** : ಸರಿ. ಇಲ್ಲಿ ಇನ್ನೂ ಅನೇಕ ಬಣ್ಣದ ಕಾಗದಗಳಿವೆ. ನಿಮಗೆ ಇಷ್ಟವಾದ ಬಣ್ಣದ ಕಾಗದವನ್ನು ಆರಿಸಿ ಚೌಕಾಕಾರವಾಗಿ ಕತ್ತರಿಸಿರಿ.

**ಅಫ್ರಿನ್** : ಎಷ್ಟೊಂದು ಬಣ್ಣದ ಕಾಗದಗಳಿವೆ! ನಾನು ಕೆಂಪು ಬಣ್ಣದ ಕಾಗದ ತೆಗೆದುಕೊಳ್ಳುವೆ. ಮೇರಿಗಂತೂ ನೀಲಿ ಬಣ್ಣವೇ ಇಷ್ಟ.

**ಮಾಮ** : ಈಗ ಪ್ರಾರಂಭಿಸೋಣ. ಮೊದಲು ನಿಮ್ಮ ಕೈಯಲ್ಲಿರುವ ಚೌಕದ ಕಾಗದವನ್ನು ಸರಿಯಾಗಿ ಮಧ್ಯಕ್ಕೆ ಮಡಿಸಿರಿ.

ಈಗ ಒಂದು ಆಯತಾಕಾರ ಆಯಿತು. ಅದನ್ನು ಇನ್ನೊಂದು ದಿಕ್ಕಿನಿಂದ ಮಡಿಸಿ. ಈಗ ಒಂದು ಪುಟ್ಟ ಚೌಕವಾಯಿತು, ಅಲ್ಲವೇ?

**ಮೇರಿ** : ಹೌದು ಮಾಮ. ಇದನ್ನು ಹಿಡಿದು ನೋಡಿದರೆ ನಾಲ್ಕು ಪದರಗಳು ಕಾಣಿಸುತ್ತಿವೆ.

**ಮಾಮ** : ಒಂದು ಪದರವನ್ನು ಅದರ ಕೆಳಗಿನ ತುದಿಗೆ ತಾಗುವಂತೆ ಅರ್ಧಕ್ಕೆ ಮಡಿಸಿರಿ. ಉಳಿದ ಮೂರು ಪದರಗಳನ್ನು ಅಂತೆಯೇ ಹಿಂದಕ್ಕೆ ಮಡಿಸಿರಿ.

**ಅಫ್ರಿನ್** : ಮಾಮ ನನಗೆ ಅರ್ಥವಾಗಲಿಲ್ಲ. ಮತ್ತೊಮ್ಮೆ ಹೇಳಿರಿ.

(ಮಾಮ ಮತ್ತೊಮ್ಮೆ ಹೇಳುವರು)

**ಅಫ್ರಿನ್** : ಹ್ಞಾಂ! ಈಗ ಅರ್ಥವಾಯಿತು. ಇದು ತ್ರಿಕೋನಾಕಾರದ ರಚನೆಯಾಯಿತು.

**ಮಾಮ** : ಸರಿ. ಈಗ ತ್ರಿಕೋನಾಕೃತಿಯ ನಡುವೆ ಒಂದು ಸೀಳು ಭಾಗ ಕಾಣುತ್ತಿದೆಯಲ್ಲವೇ? ಅದನ್ನು ಅಗಲಿಸಿಕೊಂಡು, ಅದರ ಎರಡು ಅಂಚುಗಳನ್ನು ಎದುರು ಬದುರಾಗಿ ಒತ್ತಿರಿ.

©KTBS Not to be republished



**ಮೇರಿ** : ಇದು ಇನ್ನೊಂದು ಚೌಕವಾಯಿತಲ್ಲ ಮಾಮ!

**ಅಫ್ರಿನ್** : ಅರೆ! ಇದು ಮಜವಾಗಿದೆ. ನೀವು ಹೇಳಿದಂತೆ ಮಾಡಿದೆ, ಇಲ್ಲಿ ನೋಡಿ!

**ಮಾಮ** : ಇಬ್ಬರೂ ಸರಿಯಾಗಿಯೇ ಮಾಡಿದ್ದೀರಿ. ಈಗ ಈ ಆಕೃತಿಯ ಬಿಡಿಸಬಹುದಾದ ಎರಡು ಪಕ್ಕೆಗಳನ್ನು ಹಿಡಿದು ನಿಧಾನವಾಗಿ ಬಿಡಿಸಿರಿ.

**ಇಬ್ಬರೂ**: ಅರೆ! ಇದರೊಳಗಿಂದ ದೋಣಿ ಮೂಡಿ ಬರುತ್ತಿದೆ!

**ಮಾಮ** : ಸರಿ, ಈಗ ಇನ್ನೆರಡು ಬದಿಯ ಹಾಳೆಯನ್ನು ಒತ್ತಿರಿ.

**ಇಬ್ಬರೂ**: ನೋಡಿ ಮಾಮ, ನಾವು ದೋಣಿ ಮಾಡಿಯೇಬಿಟ್ಟೆವು!

**ಮಾಮ** : ನೀವಿಬ್ಬರೂ ಬಹಳ ಜಾಣೆಯರು! ಆದರೆ ಈಗ ಮಳೆ ಬರುತ್ತಿಲ್ಲವಲ್ಲ, ದೋಣಿಯನ್ನು ಎಲ್ಲಿ ತೇಲಿ ಬಿಡುತ್ತೀರಿ?

**ಇಬ್ಬರೂ** : ನಮ್ಮ ಮನೆಯ ತೊಟ್ಟಿಯಲ್ಲಿ ಮಾಮ!

(ಮಕ್ಕಳು ಖುಷಿಯಿಂದ ತಮ್ಮ ಮನೆ ಕಡೆಗೆ ಓಡಿದರು.)

**ಕ್ಷೇತ್ರ** – ಬರೆಯುವುದು

**ಸಾಮರ್ಥ್ಯ** – ಸೂಚನೆಗಳನ್ನು ಅನುಸರಿಸಿ ಸರಳ ವಾಕ್ಯಗಳನ್ನು ರಚಿಸುವುದು.

**ಅರ್ಥ ತಿಳಿಯಿರಿ**

ಕಾತರ – ಆತುರ, ಉತ್ಸುಕತೆ; ಎದುರು ಬದುರಾಗಿ – ಮುಖಾಮುಖಿಯಾಗಿ, ಅಭಿಮುಖಿ; ಮಜ – ಸಂತೋಷ, ಆನಂದ; ಆಕೃತಿ – ಆಕಾರ; ಬದಿ – ಪಕ್ಕ, ಮಗ್ಗಲು; ಪದರ – ಮಡಿಕೆ, ಪೊರೆ.

**ವಿವರ ತಿಳಿಯಿರಿ**

ತ್ರಿಕೋನಾಕಾರ– ಮೂರು ತುದಿಗಳಿರುವ ಆಕೃತಿ.

ಚೌಕಾಕಾರ – ಉದ್ದ ಅಗಲಗಳು ಸಮಾನವಾಗಿರುವ ಆಕೃತಿ.

ಆಯತಾಕಾರ – ಚೌಕವನ್ನು ಯಾವುದಾದರೂ ಒಂದು ಬದಿಯಿಂದ ಬೆಳೆಸಿದರೆ ಸಿಗುವ ಆಕೃತಿ.

©KTBS Not to be republished



## ಅಭ್ಯಾಸ

**ಅ) ಸಂಬಂಧಿಸಿದ ಪದ ಬರೆಯಿರಿ.**

**ಉದಾ :** ಅವಳು : ಬಂದಳು :: ಅವರು : ಬಂದರು

೧. ಅವನು : ನಕ್ಕನು :: ಅವರು : ................................

೨. ಹಣ್ಣು : ರುಚಿ ಇದೆ :: ಹಣ್ಣುಗಳು : ................................

೩. ಹೂವು : ಸುಂದರವಾಗಿದೆ :: ಹೂವುಗಳು : ................................

೪. ಹುಡುಗಿ : ಹಾಡಿದಳು :: ಹುಡುಗಿಯರು : ................................

೫. ಅವನು : ದೋಣಿ ಮಾಡಿದನು :: ಅವರು: ದೋಣಿಗಳನ್ನು : ........................

**ಆ) ಈ ಪದಗಳನ್ನು ಜೋಡಿಸಿ ಅರ್ಥಪೂರ್ಣ ವಾಕ್ಯಗಳನ್ನು ಬರೆಯಿರಿ.**

| | | |
|---|---|---|
| ರಾಮನು ಗಿಡವನ್ನು | ಹೋಗುವರು | ೧) ............................................ |
| ಮಕ್ಕಳು ಪಾಠವನ್ನು | ಕುಡಿಯುವುದು | ೨) ............................................ |
| ಬೆಕ್ಕು ಹಾಲನ್ನು | ನೆಡುವನು | ೩) ............................................ |
| ಜನರು ಜಾತ್ರೆಗೆ | ಕಲಿಯುವರು | ೪) ............................................ |

**ಇ) ಮಾದರಿಯಂತೆ ಅಂತ್ಯಾಕ್ಷರ ಬಳಸಿ ಮುಂದಿನ ಎರಡು ಪದಗಳನ್ನು ಬರೆಯಿರಿ.**

**ಮಾದರಿ :** ಮಾಮ → ಮರ → ರಜ

ಕಾಗದ → ........ → ........

ಆಹಾರ → ........ → ........

ದೀಪ → ........ → .........

**ಈ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಮಕ್ಕಳು ಮಾಮನ ಮನೆಗೆ ಏಕೆ ಬಂದರು?

..........................................................................................................

..........................................................................................................

Not to be republished ©KTBS





೨. ಕಾಗದದ ದೋಣಿ ಮಾಡಲು ಬೇಕಾಗುವ ವಸ್ತುಗಳು ಯಾವುವು?

..............................................................................................................

..............................................................................................................

೩. ದೋಣಿ ಎಲ್ಲಿ ಚಲಿಸುತ್ತದೆ?

..............................................................................................................

..............................................................................................................

## ಭಾಷಾ ಚಟುವಟಿಕೆ

**ಅ) ಕೆಳಗಿನ ಅಕ್ಷರಗಳನ್ನಷ್ಟೇ ಬಳಸಿಕೊಂಡು ಸಾಧ್ಯವಾದಷ್ಟು ಪದ ರಚಿಸಿರಿ.**

| | | | | | |
|---|---|---|---|---|---|
| ಕಾ | ರ | ನ | .................... | ....................... | ....................... |
| ಮ | ಡು | ಗ | .................... | ....................... | ....................... |
| ದ | ಬ | ಜ | .................... | ....................... | ....................... |
| | ಗು | | | | |

**ಆ) ಒಗಟುಗಳನ್ನು ಬಿಡಿಸಿರಿ.**

೧. ನೀರಿನ ಮೇಲೆ ತೇಲುತ್ತೇನೆ

ಜನರನ್ನು ಹೊತ್ತು ಸಾಗಿಸುತ್ತೇನೆ

ನೀರಿಲ್ಲದೆ ನಾನು ಚಲಿಸಲಾರೆ. ನಾನು ಯಾರು? ..........................

©KTBS Not to be republished

೨. ಎಲ್ಲಿ ನೋಡಿದರೂ ನೀರಿನ ರಾಶಿ

ನನ್ನಲ್ಲಿ ಜೀವಿಗಳು ವಾಸಿಸುತ್ತವೆ

ನನ್ನ ರುಚಿ ಉಪ್ಪಾಗಿರುತ್ತದೆ. ನಾನು ಯಾರು? ..............................

೩. ನೀರಲ್ಲಿ ನಾವು ಈಜುತ್ತೇವೆ

ಗುಂಪು ಗುಂಪಾಗಿ ಸಾಗುತ್ತೇವೆ

ಬಲೆಯಲ್ಲಿ ನಾವು ಸಿಲುಕುತ್ತೇವೆ. ನಾವು ಯಾರು? ........................

## ಯೋಜನೆ

೧. ಬಣ್ಣದ ಕಾಗದಗಳನ್ನು ಮನೆ, ಹೂವು, ಗಾಳಿಪಟ ಮುಂತಾದ ಆಕಾರದಲ್ಲಿ ಕತ್ತರಿಸಿ ಅಂಟಿಸಿ ಚಿತ್ರಕೋಶ ತಯಾರಿಸಿರಿ.

## ಶುಭನುಡಿ

* ಚಟುವಟಿಕೆ, ಕ್ರಿಯಾಶೀಲತೆಯ ಸೋಪಾನ.
* ಕೇಳುತ್ತಾ, ನೋಡುತ್ತಾ, ಆಡುತ್ತಾ ಕಲಿ.
* ಮಕ್ಕಳು ಸೋಮಾರಿಗಳಾಗಬಾರದು.

©KTBS Not to be republished



## ೭. ಕಲಿತ ಪಾಠ (ಪದ್ಯ)

ನಾ ಪಾಟಿ ಹೊತ್ತು
ಹೊಸ ಬಟ್ಟೆ ಧರಿಸಿ
ನಡೆದಿದ್ದೆ ಶಾಲೆ ಕಡೆಗೆ

ಆ ಹಾಳು ನಾಯಿ
ತೆರೆದಿತ್ತು ಬಾಯಿ
ಮಲಗಿತ್ತು ಮರದ ಕೆಳಗೆ

ನಾ ಸುಮ್ಮನಿರದೆ
ಕಲ್ಲೊಂದು ಎತ್ತಿ
ಒಗೆದಿದ್ದೆ ಅದರ ಎಡೆಗೆ

ಅದು ಸಿಟ್ಟಿಗೆದ್ದು
ಕೆದರಿತ್ತು ಕಾಲು
ಇಟ್ಟಿತ್ತು ನನಗೆ ಕಣ್ಣು

ಆವೇಶದೊಳಗೆ
ಬೊಗಳುತ್ತ ಬಂತು
ಬಿಡಲಿಲ್ಲ ನನ್ನ ಬೆನ್ನು

ಮೇಲುಸಿರು ಬಿಡುತ
ನಾ ಓಡುತ್ತಿದ್ದೆ
ಕುಂದಿತ್ತು ಮೈಯ ತ್ರಾಣ

ಕಲ್ಲೆಸೆದ ತಪ್ಪು
ಕಲಿಸಿತ್ತು ಪಾಠ
ನೆನಪಿಡುವ ಹಾಗೆ ಪೂರ್ಣ!

– ರಾಜಶೇಖರ ಕುಕ್ಕುಂದಾ



©KTBS Not to be republished





**ಕ್ಷೇತ್ರ** – ಮಾತನಾಡುವುದು

**ಸಾಮರ್ಥ್ಯ** – ಅಕ್ಷರ, ಪದ, ವಾಕ್ಯಗಳನ್ನು ಸ್ಪಷ್ಟವಾಗಿ ಉಚ್ಚರಿಸುವುದು.

**ಕವಿ–ಕೃತಿ ಕುರಿತು**

ರಾಜಶೇಖರ ಕುಕ್ಕುಂದಾ ಅವರು ೧೯೬೬ರಲ್ಲಿ ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಕುಕ್ಕುಂದಾದಲ್ಲಿ ಜನಿಸಿದರು.

ಬಾಗಲಕೋಟೆಯ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಂಯೋಜಕ ಪ್ರಾಧ್ಯಾಪಕರಾಗಿರುವ ಇವರು ಮಕ್ಕಳ ಕವಿಯಾಗಿ ಪ್ರಸಿದ್ಧರು. ಚೆಲುವ–ಚಂದಿರ, ಗೋಳಗುಮ್ಮಟ, ಪುಟಾಣಿ ಪ್ರಾಸಗಳು ಇತ್ಯಾದಿ ಕೃತಿಗಳ ಮೂಲಕ ಮಕ್ಕಳಿಗೆ ಮುದ ಕೊಟ್ಟವರು. ಪ್ರಸ್ತುತ ಕವನವನ್ನು ಅವರ 'ಚೆಲುವ ಚಂದಿರ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಅರ್ಥ ತಿಳಿಯಿರಿ**

ಕೆದರು – ಹರಡು; ಆವೇಶ – ರೋಷ; ಕುಂದು – ಕುಗ್ಗು; ತ್ರಾಣ – ಶಕ್ತಿ

**ವಿವರ ತಿಳಿಯಿರಿ**

ಮೇಲುಸಿರು – ಶ್ವಾಸವನ್ನು ಮೇಲಕ್ಕೆ ಜೋರಾಗಿ ಎಳೆಯುವುದು.




**ಅ) ಖಾಲಿ ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿ ಬರೆಯಿರಿ.**

೧. ಹಾಳು ನಾಯಿ ........................ ಬಾಯಿ.

ಅ) ಮುಚ್ಚಿತ್ತು ಆ) ತೆರೆದಿತ್ತು ಇ) ಬಿಟ್ಟಿತ್ತು ಈ) ಸುಟ್ಟಿತ್ತು

೨. ಕಲ್ಲೊಂದು ................... ಒಗೆದಿದ್ದೆ ಅದರ ಎಡೆಗೆ.

ಅ) ಎತ್ತಿ ಆ) ಸುತ್ತಿ ಇ) ಬಿತ್ತಿ ಈ) ಕತ್ತಿ

©KTBS Not to be republished



೩. ಮೇಲುಸಿರು ................ ನಾ ಓಡುತ್ತಿದ್ದೆ.

ಅ) ಹಿಡಿಯುತ ಆ) ಮಿಡಿಯುತ ಇ) ಬಿಡುತ ಈ) ನೋಡುತ

೪. ಅದು ಸಿಟ್ಟಿಗೆದ್ದು ಕೆದರಿತ್ತು ..................

ಅ) ಕೈ ಆ) ಮೈ ಇ) ಕಿವಿ ಈ) ಕಾಲು

**ಆ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಮಗು ಶಾಲೆಗೆ ಹೇಗೆ ಹೊರಟಿತ್ತು?

..........................................................................................................

೨. ನಾಯಿ ಎಲ್ಲಿ ಮಲಗಿತ್ತು?

..........................................................................................................

೩. ನಾಯಿ ಆವೇಶದಿಂದ ಏನು ಮಾಡಿತು?

..........................................................................................................

೪. ಯಾವ ತಪ್ಪು ಹುಡುಗನಿಗೆ ಪಾಠ ಕಲಿಸಿತು?

..........................................................................................................

**ಇ) ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಕಣ್ಣು : ..........................................................................................

೨. ನೆನಪಿಡು : ....................................................................................




**ಅ) ಮಾದರಿಯಂತೆ ಕೆಳಗಿನ ಪದಗಳಲ್ಲಿರುವ ಒತ್ತಕ್ಷರಗಳಿಗೆ ವೃತ್ತ ಹಾಕಿ ಗುರುತಿಸಿರಿ.**

ಮಾದರಿ : ಕೆದರಿ ತ್ತು

೧. ನಡೆದಿದ್ದೆ ೨. ಸುಮ್ಮನಿರದೆ

೩. ಬಿಡಲಿಲ್ಲ ೪. ಕೊಂದಿತ್ತು

©KTBS Not to be republished



**ಆ) ಮಾದರಿಯಂತೆ ಪದಗಳ ಕೊನೆಗೆ 'ರೆ' ಅಕ್ಷರ ಬರುವ ಪದಗಳನ್ನು ಬರೆಯಿರಿ**

**ಮಾದರಿ :** ತೆರೆ

೧. ..............................

೨. ..............................

೩. ..............................

೪. ..............................

**ಇ) ಮೊದಲನೆಯ ಅಕ್ಷರ ಬದಲಿಸಿ ಅರ್ಥವುಳ್ಳ ಪದ ರಚಿಸಿರಿ.**

**ಮಾದರಿ :** ಮ ಲ ಗು ➔ ತೊ ಲ ಗು

ಒ ಗೆ ದು ➔

ಕೆ ದ ರಿ ➔

ಬೊ ಗ ಳು ➔

ಧ ರಿ ಸಿ ➔

**ಈ) ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆಯಿರಿ.**

**ಉದಾಹರಣೆ :** ಸುಮ್ಮನಿರದೆ = ಸುಮ್ಮನೆ + ಇರದೆ

೧. ಕಲ್ಲೊಂದು : ..............................................

೨. ಆವೇಶದೊಳಗೆ : ..........................................

## ಯೋಜನೆ

ಅ) ಯಾವುದಾದರೊಂದು ಸಾಕುಪ್ರಾಣಿಯ ಬಗ್ಗೆ ಟಿಪ್ಪಣಿ ಬರೆಯಿರಿ.

### ಶುಭನುಡಿ

* ಸಕಲ ಜೀವಿಗಳಲ್ಲಿ ದಯೆ ಇರಲಿ.
* ಬದುಕು, ಬದುಕಲು ಬಿಡು.
* ಪ್ರಾಣಿ ಸಂಪತ್ತು ಅಳಿದರೆ, ಪರಿಸರಕ್ಕೆ ಆಪತ್ತು.

©KTBS Not to be republished



# ೮. ಬಾಲಕಿಯ ಸಾಹಸ



ಅಂದು ೨೦೧೩ ಜೂನ್ ೧೬. ಮುಸ್ಸಂಜೆಯ ಹೊತ್ತು. ಉತ್ತರಾಖಂಡದ ಕೇದಾರನಾಥ ದೇವಾಲಯದ ಪರಿಸರದಲ್ಲಿ ಹಿಂದೆಂದೂ ಕಂಡಿರದ ಭೀಕರ ಮಳೆ. ದೇವಾಲಯದೊಳಕ್ಕೆ ನೀರು ನುಗ್ಗಿತ್ತು. ಅಲ್ಲಿಗೆ ಪ್ರವಾಸಿಗಳಾಗಿ ಬಂದಿದ್ದ ಭಕ್ತ ಸಮೂಹ ದಿಕ್ಕಾಪಾಲಾಗಿ ಹೋಗಿತ್ತು. ದೆಹಲಿಯಿಂದ ಬಂದಿದ್ದ ಮಹಿಕಾ ಗುಪ್ತ ಎಂಬ ಒಂಬತ್ತರ ಹರೆಯದ ಬಾಲಕಿ ಕೇದಾರನಾಥ ದೇವಾಲಯದ ಒಳಗಿದ್ದಳು. ಅವಳ ಅಪ್ಪ, ಅಮ್ಮ ಹಾಗೂ ನಾಲ್ಕರ ಹರೆಯದ ತಮ್ಮ ಕಾಣಿಸಲೇ ಇಲ್ಲ. ಮಹಿಕಾ ಗಾಬರಿಯಿಂದ ಬೊಬ್ಬಿರಿದಳು. ಪ್ರವಾಹದ ಗದ್ದಲದಲ್ಲಿ ಅದು ಯಾರಿಗೂ ಕೇಳಿಸಲಿಲ್ಲ. ದೇವಾಲಯದ ಸರಳೊಂದನ್ನು ಹಿಡಿದು ಆಕೆ ನೇತಾಡುತ್ತಿದ್ದಳು.

ಸ್ವಲ್ಪ ಸಮಯದ ಅನಂತರ ಓರ್ವ ಬಾಲಕನ ಚೀತ್ಕಾರ ಕೇಳಿಸಿತು. ಆಕೆ ಕಿವಿಗೊಟ್ಟು ಆಲಿಸಿದಳು. ಆ ಧ್ವನಿ ಮಹಿಕಾಳ ತಮ್ಮನದು! ಜಲಪ್ರವಾಹವು ಆತನನ್ನು ರಭಸದಿಂದ ಒಳಕ್ಕೆ ಎಸೆಯಿತು. ಆತನ ಕಾಲು ಕಲ್ಲೊಂದಕ್ಕೆ ಜೋರಾಗಿ ಬಡಿಯಿತು. ಮೂಳೆ ಮುರಿದೇ



©KTBS Not to be republished



ಹೋಯಿತು. ಮಹಿಕಾಳಿಗೆ ಈಜು ಬರುತ್ತಿರಲಿಲ್ಲ. ಆದರೂ ಧೈರ್ಯಗೆಡದೆ ಅವನತ್ತ ಕೈ ಬೀಸಿದಳು. ಆತನನ್ನು ಬಲವಾಗಿ ತನ್ನೆಡೆಗೆ ಸೆಳೆದುಕೊಂಡಳು. ರಭಸವಾಗಿ ಬರುತ್ತಿದ್ದ ನೀರು, ಮಣ್ಣು ಅವರ ಮೂಗು ಬಾಯಿಗಳಿಗೆ ನುಗ್ಗುತ್ತಿತ್ತು. ಆದರೂ ಅವಳು ಎದೆಗುಂದಲಿಲ್ಲ. ತನ್ನ ಪುಟ್ಟ ತಮ್ಮನನ್ನು ರಕ್ಷಿಸುವುದೊಂದೇ ಅವಳ ಗುರಿಯಾಗಿತ್ತು. ಸಹಾಯಕ್ಕಾಗಿ ಅರಚಾಡಿದಳು. ಯಾರೂ ಹತ್ತಿರ ಸುಳಿಯಲಿಲ್ಲ. ನೀರು ಮತ್ತೂ ಏರುತ್ತಿತ್ತು.

ರಾತ್ರಿಯಿಡೀ ಮಹಿಕಾ ತನ್ನ ತಮ್ಮನನ್ನು ಅಪ್ಪಿಕೊಂಡು ಸರಳನ್ನು ಹಿಡಿದು ಅಲ್ಲೇ ಕುಳಿತಿದ್ದಳು. ಹೊಟ್ಟೆಗೆ ಕೊಚ್ಚೆನೀರೇ ಆಹಾರ. ಮತ್ತೂ ಒಂದು ದಿನ ಕಳೆಯಿತು. ಮೂರನೆಯ ದಿವಸಕ್ಕೆ ನೀರಿನ ರಭಸ ತಗ್ಗಿತ್ತು. ರಕ್ಷಣಾಪಡೆಯವರೊಂದಿಗೆ ಆಕೆಯ ತಾಯಿ ದೇವಾಲಯದೊಳಕ್ಕೆ ಬಂದರು. ತಮ್ಮನನ್ನು ತಬ್ಬಿಕೊಂಡು ಅನ್ನ ನೀರಿಲ್ಲದೆ ನಿತ್ರಾಣ ಸ್ಥಿತಿಯಲ್ಲಿ ಗೋಡೆಗೊರಗಿ ಕುಳಿತಿದ್ದ ಮಹಿಕಾಳನ್ನು ಕಂಡರು. ಮಕ್ಕಳನ್ನು ಆ ಸ್ಥಿತಿಯಲ್ಲಿ ಕಂಡ ತಾಯಿಗೆ ದುಃಖ ಉಮ್ಮಳಿಸಿ ಬಂತು. ಆಕೆ ಇಬ್ಬರನ್ನೂ ಗಟ್ಟಿಯಾಗಿ ತಬ್ಬಿಕೊಂಡಳು.

ಮರುದಿವಸ ಮಹಿಕಾಳ ವೀರಗಾಥೆಯನ್ನು ಪತ್ರಿಕೆ, ದೂರದರ್ಶನ, ರೇಡಿಯೋಗಳು ಪ್ರಸಾರ ಮಾಡಿದುವು. ಆಕೆಯ ಶೌರ್ಯವನ್ನು ಮನಗಂಡು ರಾಷ್ಟ್ರಪತಿಯವರು ೨೦೧೪ ಜನವರಿ ೨೬ರಂದು 'ರಾಷ್ಟ್ರೀಯ ಶೌರ್ಯ ಪ್ರಶಸ್ತಿ'ಯನ್ನು ಕೊಟ್ಟು ಗೌರವಿಸಿದರು. ಇಂದಿನ ಮಕ್ಕಳು ಮುಂದಿನ ಧೀರ ಜನಾಂಗವಾಗಬೇಕೆಂಬ ಸಂದೇಶವನ್ನು ರಾಷ್ಟ್ರಪತಿಯವರು ತಮ್ಮ ಭಾಷಣದಲ್ಲಿ ಸಾರಿದರು. ಇಂತಹ ಸಾಹಸ ಮಾಡಿದ ಮಹಿಕಾ ಗುಪ್ತಳನ್ನು ಎಷ್ಟು ಕೊಂಡಾಡಿದರೂ ಸಾಲದು.

**ಕ್ಷೇತ್ರ** – **ಮಾತನಾಡುವುದು**

**ಸಾಮರ್ಥ್ಯ** – **ಸರಳ ಕತೆಗಳನ್ನು ಓದಿ ಪ್ರಶ್ನೆಗಳಿಗೆ ಪದ/ ವಾಕ್ಯಗಳಲ್ಲಿ ಉತ್ತರಿಸುವುದು.**

**ಅರ್ಥ ತಿಳಿಯಿರಿ**

ಮುಸ್ಸಂಜೆ – ಸೂರ್ಯ ಮುಳುಗುವ ಹೊತ್ತು : ಸಮೂಹ – ಗುಂಪು; ಪ್ರವಾಸಿ – ಪ್ರಯಾಣಿಕ, ಯಾತ್ರಿಕ ; ಸೆಳೆಯು – ಎಳೆಯು, ಆಕರ್ಷಿಸು ; ಪ್ರವಾಹ – ತುಂಬಿ ಹರಿಯುವಿಕೆ ; ಚೀತ್ಕಾರ – ಅರಚುವಿಕೆ, ಬೊಬ್ಬಿರಿಯುವಿಕೆ ; ಕೊಚ್ಚೆ – ಕೊಳೆತ ವಸ್ತು ; ಸಂದೇಶ – ಮಹತ್ವದ ಮಾತು, ವಿಶೇಷ ಸುದ್ದಿ : ನಿತ್ರಾಣ – ಬಲಹೀನ, ದುರ್ಬಲ ; ಕೊಂಡಾಡು – ಹೊಗಳು, ಪ್ರಶಂಸೆ ಮಾಡು ; ಎದೆಗುಂದು – ಧೈರ್ಯ ಕಳೆದುಕೊಳ್ಳು, ಹೆದರು ; ನನಸು – ಸತ್ಯ, ನಿಜ

©KTBS Not to be republished





**ವಿವರ ತಿಳಿಯಿರಿ**

ಉತ್ತರಾಖಂಡ – ಉತ್ತರ ಭಾರತದ ಒಂದು ರಾಜ್ಯ.

ಕೇದಾರನಾಥ – ಉತ್ತರಾಖಂಡ ರಾಜ್ಯದಲ್ಲಿರುವ ಪ್ರಸಿದ್ಧ ಶಿವದೇವಾಲಯ.

ರಕ್ಷಣಾ ಪಡೆ – ಅಪಾಯವಾದಾಗ ಕಾಪಾಡುವ ಸೈನಿಕರ ತಂಡ.

ಉಮ್ಮಳಿಸು – ಮೇಲೆ ಮೇಲೆ ಬರು, ಉಕ್ಕಿಬರು.

ರಾಷ್ಟ್ರಪತಿ – ದೇಶದ ಪ್ರಥಮ ಪ್ರಜೆ.

ವೀರಗಾಥೆ – ವೀರರ ಶೌರ್ಯವನ್ನು ಕುರಿತ ಹಾಡು, ಕಥೆ.

## ಅಭ್ಯಾಸ

**ಅ) ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಗಾಬರಿ : ..........................................................................................

೨. ಸಾಹಸ : ..........................................................................................

೩. ಸಹಾಯ : ..........................................................................................

**ಆ) ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ.**

೧. ತಾಯಿ, ಜನನಿ, ತಂದೆ, ಅಮ್ಮ ..........................

೨. ಪ್ರಶಸ್ತಿ, ಪುರಸ್ಕಾರ, ಸನ್ಮಾನ, ಅವಮಾನ ..........................

೩. ಸಂತಸ, ದುಃಖ, ಆನಂದ, ಸಂತೋಷ ..........................

೪. ಕುಮಾರ, ಕುವರಿ, ಹುಡುಗಿ, ಬಾಲಕಿ ..........................

**ಇ) ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧) ಭೀಕರ ಮಳೆ ಬಂದಾಗ ಮಹಿಕಾ ಗುಪ್ತ ಎಲ್ಲಿದ್ದಳು?

..........................................................................................................

೨) ಮಹಿಕಾ ಗುಪ್ತಾಳಿಗೆ ಯಾವ ಪ್ರಶಸ್ತಿ ನೀಡಲಾಯಿತು?

..........................................................................................................

©KTBS Not to be republished

೩) ನಮ್ಮ ದೇಶದ ಈಗಿನ ರಾಷ್ಟ್ರಪತಿಗಳ ಹೆಸರೇನು?

..............................................................................................................

## ಈ) ಎರಡು ವಾಕ್ಯಗಳಲ್ಲಿ ಉತ್ತರಿಸಿರಿ

೧) ಮಹಿಕಾ ಏಕೆ ಬೊಬ್ಬಿರಿದಳು?

..............................................................................................................

..............................................................................................................

೨) ರಾಷ್ಟ್ರಪತಿಯವರು ಮಕ್ಕಳಿಗೆ ನೀಡಿದ ಸಂದೇಶವೇನು?

..............................................................................................................

..............................................................................................................




## ಅ) ಅರ್ಥಕೊಡುವಂತೆ ಅಕ್ಷರ ಸೇರಿಸಿ ಪದಬಂಧ ಪೂರ್ಣಗೊಳಿಸಿರಿ.

| | | |
|---|---|---|
| | | |
| ಸಾ | ಹ | ಸ |
| | | |

| | | |
|---|---|---|
| | ಜ | |
| ಮ | | ಳು |
| | ಳ | |

| | | |
|---|---|---|
| | ಸ | |
| ಆ | | ರ |
| | ಯ | |

| | | |
|---|---|---|
| | ಪ | |
| | ವ | |
| | ನ | |

©KTBS Not to be republished



## ಆ) 'ನೀರು' ಪದಕ್ಕೆ ಸಂಬಂಧವಿರುವ ಪದಗಳನ್ನು ಬರೆಯಿರಿ.

ಉದಾ : ನೀರು→ಕೆರೆ

| | | |
|---|---|---|
| | | |
| | | |
| | | |

## ಯೋಜನೆ

೧. ಶೌರ್ಯ ಪ್ರಶಸ್ತಿ ಪಡೆದ ಮಕ್ಕಳ ಚಿತ್ರಗಳನ್ನು ಸಂಗ್ರಹಿಸಿ ಚಿತ್ರಕೋಶ ತಯಾರಿಸಿರಿ.

## ಶುಭ ನುಡಿ

* ಧೈರ್ಯವೇ ಯಶಸ್ಸಿನ ಸಾಧನ.
* ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.
* ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ.

©KTBS Not to be republished





# ೯. ಕೊಕ್ಕರೆಯ ಪ್ರಾರ್ಥನೆ (ಪದ್ಯ)

ರಂಗನತಿಟ್ಟು ಬೆಳ್ಳೂರು
ಮಂಡಗದ್ದೆಗೆ ಹೋಗೋಣ
ಹಕ್ಕಿಗಳನ್ನು ನೋಡೋಣ
ಅವುಗಳ ಚಿಲಿಪಿಲಿ ಕೇಳೋಣ

ಯಾವುದೊ ದೇಶದ ಕೊಕ್ಕರೆ
ಹಾರಿ ಬರುವುದು ಇಲ್ಲಿಗೆ
ಕ್ರೀಮು ಪೌಡರ್ ಹಚ್ಚೋದಿಲ್ಲ
ಆದರೂ ಎಷ್ಟು ಬೆಳ್ಳಗೆ!

ನೀರಿನ ಹತ್ತಿರ ನಿಂತು
ಮಾಡುತ್ತಿರುವುದು ಏನು?
ಬೇಡುತ್ತಿದೆ 'ಓ ದೇವರೆ
ಕರುಣಿಸು ಒಳ್ಳೆಯ ಮೀನು'

– ಎಚ್. ಡುಂಡಿರಾಜ್



**ಕ್ಷೇತ್ರ** – ಬರೆಯುವುದು

**ಸಾಮರ್ಥ್ಯ** – ಸ್ವತಂತ್ರವಾಗಿ ಸರಳ ಪದ ಮತ್ತು ಸರಳ ವಾಕ್ಯಗಳನ್ನು ಬರೆಯುವುದು. ಉಕ್ತಲೇಖನ ಬರೆಸುವುದು.

©KTBS Not to be republished





## ಕವಿ–ಕೃತಿ ಕುರಿತು

ಕುಂದಾಪುರ ತಾಲ್ಲೂಕಿನ ಹಟ್ಟಿಕುದ್ರುವಿನಲ್ಲಿ ೧೯೫೬ರಲ್ಲಿ ಜನಿಸಿದ ಎಚ್. ಡುಂಡಿರಾಜರು ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. 'ಹನಿ ಖಜಾನೆ', 'ಡುಂಡಿಮ', 'ಆಯದ ಕವನಗಳು', 'ಕೊರಿಯಪ್ಪನ ಕೊರಿಯೋಗ್ರಫಿ', 'ಹುಡುಕಾಟ', 'ಅನಿವಾಸಿಗಳೇ ವಾಸಿ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಹನಿಗವನ, ಇಡಿಗವನ, ಹಾಸ್ಯ ನಾಟಕ, ಲಲಿತ ಪ್ರಬಂಧಗಳಿಗೆ ಡುಂಡಿರಾಜರು ಹೆಸರುವಾಸಿಯಾಗಿದ್ದಾರೆ.

ಪ್ರಸ್ತುತ ಕವನವನ್ನು 'ಇಂಚರ ಬಂದಳು ಇಂಚರ' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಅರ್ಥ ತಿಳಿಯಿರಿ

ಕರುಣಿಸು – ಮರುಕದಿಂದ ನೀಡು, ದಯಪಾಲಿಸು

## ವಿವರ ತಿಳಿಯಿರಿ

ರಂಗನತಿಟ್ಟು – ಮಂಡ್ಯ ಜಿಲ್ಲೆಯಲ್ಲಿರುವ ಪಕ್ಷಿಧಾಮ

ಬೆಳ್ಳೂರು – ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿರುವ ಬೆಳ್ಳೂರು. 'ಕೊಕ್ಕರೆ ಬೆಳ್ಳೂರು' ಎಂದೇ ಪ್ರಸಿದ್ಧವಾಗಿದೆ. ಇಲ್ಲಿ ಪಕ್ಷಿಧಾಮವಿದೆ.

ಮಂಡಗದ್ದೆ – ಶಿವಮೊಗ್ಗ ಜಿಲ್ಲೆಯಲ್ಲಿರುವ ಮಂಡಗದ್ದೆಯಲ್ಲೂ ಪಕ್ಷಿಧಾಮವಿದೆ.

ಚಿಲಿಪಿಲಿ – ಹಕ್ಕಿಗಳ ಕೂಗು

ಪಕ್ಷಿಧಾಮ – ವಂಶಾಭಿವೃದ್ಧಿಗಾಗಿ ಬೇರೆ ಬೇರೆ ಸ್ಥಳಗಳಿಂದ ಪಕ್ಷಿಗಳು ವಲಸೆ ಬಂದು ತಾತ್ಕಾಲಿಕವಾಗಿ ನೆಲೆಸುವ ಸ್ಥಳ

## ಅಭ್ಯಾಸ

### ಅ) ಪ್ರಾಸಪದಗಳನ್ನು ಓದಿರಿ ಮತ್ತು ಬರೆಯಿರಿ.

ಹೋಗೋಣ – ನೋಡೋಣ ..........................................

ಇಲ್ಲಿಗೆ – ಬೆಳ್ಳಗೆ ..........................................

ಏನು – ಮೀನು ..........................................

Not to be republished ©KTBS





**ಆ) ಪದ್ಯದ ಮುಂದಿನ ಸಾಲುಗಳನ್ನು ಬರೆದು ಪೂರ್ಣಗೊಳಿಸಿರಿ..**

ಯಾವುದೋ ದೇಶದ ..........................

........................... .................. ಇಲ್ಲಿಗೆ

ಕ್ರೀಮು ............................ ................

....................... ...................... ಬೆಳ್ಳಗೆ

**ಇ) ಪಕ್ಷಿಗಳಿಗೆ ತಕ್ಕಂತೆ ಕೂಗನ್ನು ಹೊಂದಿಸಿ ಬರೆಯಿರಿ.**

| | | |
|---|---|---|
| ಅ) ಕೋಳಿ | ಕುಹೂ ಕುಹೂ | .......................................... |
| ಆ) ಕಾಗೆ | ಗುಟರ್.. ಗುಟರ್.. | .......................................... |
| ಇ) ಗುಬ್ಬಿ | ಕಾ... ಕಾ.... | .......................................... |
| ಈ) ಕೋಗಿಲೆ | ಚೀಂವ್... ಚೀಂವ್.. | .......................................... |
| ಉ) ಪಾರಿವಾಳ | ಕೊಕ್ಕೊಕ್ಕೋ | .......................................... |

**ಈ) ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದ ಅಕ್ಷರಗಳನ್ನು ಸರಿಪಡಿಸಿ ಬರೆಯಿರಿ.**

೧. ಅಕ್ಕಿಗಳ ಚಿಲಿಪಿಲಿ ಕೇಲ್ಲೋಣ.

..........................................................................................................

೨. ನೀರಿನ ಅತ್ತಿರ ನಿಂತು ಹೇನು ಮಾಡುತ್ತಿರುವೆ?

..........................................................................................................

೩. ಯಾವುದೋ ದೇಸದ ಕೊಕ್ಕರೆ

..........................................................................................................

೪. ಕರುಣಿಸು ಒಲ್ಲೆಯ ಮೀನು.

..........................................................................................................

**ಉ) ಬಿಟ್ಟಿರುವ ಸ್ಥಳಗಳನ್ನು ಸೂಕ್ತವಾದ ಉತ್ತರಗಳಿಂದ ತುಂಬಿರಿ.**

೧. ಇಂಪಾಗಿ ಹಾಡುವ ಪಕ್ಷಿ ..........................................

©KTBS Not to be republished





೨. ರಾತ್ರಿಯಲ್ಲಿ ಕೂಗುವ ಪಕ್ಷಿ ..........................................

೩. ನೃತ್ಯ ಮಾಡುವ ಪಕ್ಷಿ ..........................................

೪. ಸುಂದರವಾಗಿ ಗೂಡು ಹೆಣೆಯುವ ಪಕ್ಷಿ ..........................................

(ನವಿಲು, ಗಿಳಿ, ಕೋಗಿಲೆ, ಗೂಬೆ, ಗೀಜಗ)

**ಊ) ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಪಕ್ಷಿಗಳು ಹೇಗೆ ಶಬ್ದ ಮಾಡುತ್ತವೆ?

..........................................................................................................

೨. ಕೊಕ್ಕರೆ ದೇವರನ್ನು ಏನೆಂದು ಬೇಡುತ್ತದೆ?

..........................................................................................................

೩. ಪಕ್ಷಿಗಳನ್ನು ನೋಡಲು ಎಲ್ಲಿಗೆ ಹೋಗೋಣ ಎಂದು ಕವಿ ಹೇಳುತ್ತಾರೆ?

..........................................................................................................




**ಅ) ಕೊಟ್ಟಿರುವ ಪದಗಳನ್ನು ಬಳಸಿಕೊಂಡು ವಾಕ್ಯಗಳನ್ನು ರಚಿಸಿರಿ.**

ಉದಾ : ಉಮಾ ಊಟ ಮಾಡಿದಳು.

| | | |
|---|---|---|
| ಉಮಾ | | ಮಾಡಿದಳು |
| ಸುಮ | ಊಟ | ಹೋದಳು |
| ರಮೇಶ | ಶಾಲೆಗೆ | ಹೋದನು |
| | | ಮಾಡಿದನು |

೧ ..........................................................................................................

೨ ..........................................................................................................

೩ ..........................................................................................................

©KTBS Not to be republished





೪ ........................................................................................................

೫ ........................................................................................................

೬ ........................................................................................................

**ಆ) ಕೊಟ್ಟಿರುವ ಪದಗಳನ್ನು ಬಳಸಿ ಕವಿತೆ ಪೂರ್ಣಗೊಳಿಸಿರಿ.**

**(ನಕ್ಕು, ಅಟ್ಟ, ಎತ್ತಿ, ಕದ್ದು)**

ನಮ್ಮ ಪುಟ್ಟ ಎಂಥ ದಿಟ್ಟ
ತಟ್ಟೆ ಹಿಡಿದು ಹೊರಟು ಬಿಟ್ಟ
ಮೆಲ್ಲ............ ಹತ್ತಿ ಬಿಟ್ಟ
ಡಬ್ಬಿಯನ್ನು ತೆರೆದು ಬಿಟ್ಟ
............. ಉಂಡೆ ತಿಂದು ಬಿಟ್ಟ
ಡಬ್ಬಿ ........... ಹಾಕಿಬಿಟ್ಟ
ಅಮ್ಮ ಬಂದ್ರೆ ........... ಬಿಟ್ಟ
ಹ್ಹ ಹ್ಹ ಹ್ಹ

## ಯೋಜನೆ

**ಅ) ಶಿಕ್ಷಕರ ಸಹಾಯದಿಂದ ಪಕ್ಷಿಧಾಮಗಳ ಹೆಸರನ್ನು ಪಟ್ಟಿ ಮಾಡಿ, ಅವುಗಳ ಬಗ್ಗೆ ತಿಳಿಯಿರಿ.**

**ಆ) ಹಕ್ಕಿಗಳ ಗರಿಗಳನ್ನು ಸಂಗ್ರಹಿಸಿ, ಅಂಟಿಸಿ ಕೋಶ ತಯಾರಿಸಿರಿ.**

### ಶುಭನುಡಿ

* ದೇಶ ಸುತ್ತು, ಕೋಶ ಓದು.
* ಪ್ರಾಣಿಗಳಲ್ಲಿ ದಯೆಯಿರಲಿ.

©KTBS Not to be republished





# ೧೦. ಆರೋಗ್ಯ ಭಾಗ್ಯ

**ಡಾಕ್ಟರ್** : ನಿನ್ನ ಹೆಸರೇನು ಪುಟ್ಟಿ?

**ಕಾವ್ಯ** : ಕಾವ್ಯ.

**ಡಾಕ್ಟರ್** : ಏನು ತೊಂದರೆ ಕಾವ್ಯ?

**ಕಾವ್ಯ** : ಡಾಕ್ಟರ್, ನಿನ್ನೆಯಿಂದ ಹೊಟ್ಟೆ ನೋಯುತ್ತಿದೆ. ಶಾಲೆಗೂ ಹೋಗಿಲ್ಲ..

**ಡಾಕ್ಟರ್** : ಹೌದಾ... ಅದಕ್ಕೆ ಯಾಕೆ ಚಿಂತೆ? ಓ! ಇದ್ಯಾರು ನಿನ್ನ ಅಮ್ಮನಾ?

**ಕಾವ್ಯ** : ಹೌದು ಡಾಕ್ಟರ್.

**ಡಾಕ್ಟರ್** : ಸರಿ, ನಿನ್ನೆ ಏನೇನು ತಿಂದಿದ್ದೆ ಹೇಳ್ತೀಯಾ?

**ಕಾವ್ಯ** : ನಿನ್ನೆ ಬೆಳಗ್ಗೆ ಇಡ್ಲಿ ಚಟ್ನಿ.. ಮಧ್ಯಾಹ್ನ ಮೊಸರನ್ನ.. ಮತ್ತೆ ರಾತ್ರಿ ಅನ್ನ ಸಾಂಬಾರ್ ಊಟ ಮಾಡಿದ್ದೆ ಸರ್.

**ಡಾಕ್ಟರ್** : ಆಯ್ತು. ನಿಮ್ಮ ಮನೆಗೆ ಕುಡಿಯುವ ನೀರನ್ನು ಎಲ್ಲಿಂದ ತರುತ್ತೀರಿ?




©KTBS
Not to be republished



**ಕಾವ್ಯ** : ಮನೆಯ ಮುಂದೆ ಸಾರ್ವಜನಿಕ ನಲ್ಲಿ ಇದೆ. ಅಲ್ಲಿಂದ ನೀರು ತರುತ್ತೇವೆ ಸರ್.

**ಡಾಕ್ಟರ್** : ಅದನ್ನು ಹಾಗೆಯೇ ಕುಡಿಯಲು ಬಳಸುತ್ತೀರ?

**ಅಮ್ಮ** : ಇಲ್ರೀ ಸಾಯೇಬ್ರ! ಕುದಿಸಿ ಆರಿಸಿದ ನಂತರಾನೇ ಮಕ್ಳಿಗೆ ಕುಡಿಯಾಕ್ ಕೊಡ್ತೀವಿ.

**ಡಾಕ್ಟರ್** : ನಿಮ್ಮ ಮನೆಯ ಸುತ್ತಲಿನ ವಾತಾವರಣ ಹೇಗಿದೆ?

**ಕಾವ್ಯ** : ತುಂಬಾ ಗಲೀಜಾಗಿತ್ತು. ಮನೆಯ ಮುಂದಿನ ಚರಂಡಿ ಕಟ್ಟಿಕೊಂಡಿತ್ತು. ಅಪ್ಪನೇ ಕಟ್ಟಿಕೊಂಡ ಚರಂಡಿಯನ್ನು ಆಗಾಗ ಬಿಡಿಸಿ ಸ್ವಚ್ಛ ಮಾಡುತ್ತಿರುತ್ತಾರೆ. ಎಲ್ಲೂ ನೀರು ನಿಲ್ಲದಂತೆ ನೋಡಿಕೊಳ್ಳುತ್ತಾರೆ. ನಾವೆಲ್ಲರೂ ಸೇರಿ ಮನೆಯ ಸುತ್ತಮುತ್ತ ಸ್ವಚ್ಛ ಮಾಡುತ್ತಿರುತ್ತೇವೆ.

**ಡಾಕ್ಟರ್** : ಮನೆಯೊಳಗೆ ಗಾಳಿ ಬೆಳಕು ಸಾಕಷ್ಟು ಬರುತ್ತದೆಯೇ?

**ಕಾವ್ಯ** : ಹೌದು ಸರ್. ನಮ್ಮ ಮನೆಯೊಳಗೆ ಗಾಳಿ ಹಾಗು ಬೆಳಕು ಚೆನ್ನಾಗಿಯೇ ಬರುತ್ತದೆ.

**ಡಾಕ್ಟರ್** : ಮನೆಯೊಳಗೆ ಸ್ವಚ್ಛವಾಗಿದೆಯೇ?

**ಕಾವ್ಯ** : ಪ್ರತಿದಿನ ಮನೆಯ ಒಳಭಾಗವನ್ನು ನಾವು ಸ್ವಚ್ಛಗೊಳಿಸುತ್ತೇವೆ.

**ಡಾಕ್ಟರ್** : ಸರಿ. ಹೊಟ್ಟೆನೋವು ಇದ್ದರೂ ಸಮಾಧಾನದಿಂದ ನನ್ನ ಪ್ರಶ್ನೆಗಳಿಗೆ ಉತ್ತರಿಸಿದ್ದೀಯ. ನೀನು ಜಾಣೆ.. ಈಗ ನಿನ್ನ ಪರೀಕ್ಷೆ ಮಾಡೋಣವೇ? ಎಲ್ಲಿ ಬಾಯಿ ತೆರೆ.. ನಾಲಗೆ ಹೊರಗೆ ಹಾಕು.. ಹ್ಞಾಂ.. ಈಗ ನಿನ್ನ ಕಣ್ಣು ನೋಡುವೆ.. ಆಯ್ತು.. ಈಗ ದೀರ್ಘವಾಗಿ ನಾಲ್ಕಾರು ಬಾರಿ ಉಸಿರಾಡು.

(ಕಾವ್ಯ ಡಾಕ್ಟರ್ ಸೂಚನೆಗಳನ್ನು ಪಾಲಿಸುವಳು)

ಸರಿ ಆಯ್ತು ಬಿಡು, ಹೆದರಬೇಡ. ಈಗ ಇನ್ನೊಂದೆರಡು ಪ್ರಶ್ನೆಗಳಿಗೆ ಉತ್ತರಿಸುತ್ತೀಯಾ?

**ಕಾವ್ಯ** : ಸರ್, ನನಗೆ ಏನಾಗಿದೆ? ತುಂಬಾ ಭಯವಾಗುತ್ತಿದೆ..



©KTBS Not to be republished



ಡಾಕ್ಟರ್ : ಪುಟ್ಟಿ, ಹೆದರಬೇಡ. ನೋಡು, ನಿನ್ನ ಮನೆ ಒಳಗೆ ಮತ್ತು ಹೊರಗೆ ಸ್ವಚ್ಛವಾಗಿದೆ, ನೀವು ಕುದಿಸಿ ಆರಿಸಿದ ನೀರನ್ನು ಕುಡಿಯುತ್ತಿದ್ದೀರಿ. ನಿನ್ನೆ ಸೇವಿಸಿದ್ದೆಲ್ಲವೂ ಒಳ್ಳೆಯ ಆಹಾರವೇ ಆಗಿದೆ. ನೀನು ಸ್ನಾನ ಮಾಡಿ ಶುಭ್ರವಾದ ಬಟ್ಟೆ ಧರಿಸಿ ಬಂದಿದ್ದೀಯ. ನಿನ್ನ ಕೈಕಾಲಿನ ಉಗುರುಗಳು ಸ್ವಚ್ಛವಾಗಿವೆ.

ಕಾವ್ಯ : ಮತ್ತೆ.. ನನಗೆ ಹೊಟ್ಟೆನೋವು ಹೇಗೆ ಬಂತು ಸರ್?

ಡಾಕ್ಟರ್ : ಹ್ಞಾಂ ಜಾಣೆ.. ಅದನ್ನೇ ನಾವು ಈಗ ತಿಳಿದುಕೊಳ್ಳಬೇಕು. ನಿನ್ನ ನಿತ್ಯದ ಆಹಾರವಲ್ಲದೆ ಮತ್ತೆ ಏನಾದರೂ ತಿಂದೆಯಾ? ನೆನಪು ಮಾಡಿಕೊಂಡು ಹೇಳು?

ಕಾವ್ಯ : ಅದೂ... ಅದು... ಸರ್.

ಡಾಕ್ಟರ್ : ಯಾಕೆ? ಯಾಕೆ ಭಯ?

ಕಾವ್ಯ : ನಿನ್ನೆ ಬೆಳಗ್ಗೆ ಶಾಲೆಯ ಹೊರಗೆ ಮಾರುತ್ತಿದ್ದ ಕರಿದ ತಿಂಡಿಯನ್ನು ತಿಂದಿದ್ದೆ. ಅಮ್ಮ ಬೈಯುತ್ತಾಳೆಂತ ಹೇಳಿರಲಿಲ್ಲ..

ಡಾಕ್ಟರ್ : ನೋಡಿದೆಯಾ.. ನಿನ್ನ ಹೊಟ್ಟೆನೋವಿಗೆ ಕಾರಣ ನಿನ್ನ ಬಳಿಯೇ ಇದೆ. ರಸ್ತೆ ಬದಿಯಲ್ಲಿ ಮಾರುವ ತಿಂಡಿ ತಿನಿಸುಗಳನ್ನು ತಿನ್ನಬಾರದೆಂದು ನೀನು ಓದಿದ್ದೀಯಲ್ಲವೇ. ಅಂತಹ ಆಹಾರ ಪದಾರ್ಥಗಳ ಮೇಲೆ ಧೂಳು ಕೂತಿರುತ್ತದೆ. ನೊಣ, ಸೊಳ್ಳೆಯಂತಹ ಕ್ರಿಮಿಕೀಟಗಳಿಂದ ಇವು ಮಲಿನಗೊಂಡಿರುತ್ತವೆ. ಈಗ ಈ ಔಷಧಿಯನ್ನು ಎರಡು ದಿನ ಸೇವಿಸು. ಮುಂದೆ ಯಾವತ್ತೂ ರಸ್ತೆ ಬದಿಯ ತಿಂಡಿ ತಿನಿಸುಗಳನ್ನು ತಿನ್ನಬೇಡ. ಅದು ನಿನ್ನ ಹೊಟ್ಟೆಗೆ ಹೊಂದೋದಿಲ್ಲ; ತಿಳೀತಾ?

ಕಾವ್ಯ : ಅಬ್ಬಾ! ನನಗೆ ಈಗ ಸಮಾಧಾನವಾಯಿತು. ಎಲ್ಲಿ ಇಂಜೆಕ್ಷನ್ ಕೊಡುತ್ತೀರೋ ಎಂದು ಹೆದರಿದ್ದೆ. ಇನ್ನು ಮುಂದೆ ಹಾಗೆ ಮಾಡೊಲ್ಲ ಸರ್.

ಅಮ್ಮ : ನೀವೇ ಬುದ್ಧಿ ಹೇಳಿ ಚಲೋ ಮಾಡಿದಿರಿ ಸಾಹೇಬ್ರ. ನಮ್ಮ ಮಾತೇ ಕೇಳಾಕಿಲ್ಲ ಅಂತೀನಿ.

ಡಾಕ್ಟರ್ : ಆಯ್ತಮ್ಮ. ಹೋಗಿ ಬನ್ನಿ.

**ಕ್ಷೇತ್ರ – ಆಲಿಸುವುದು**

**ಸಾಮರ್ಥ್ಯ – ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆಯನ್ನು ಅರ್ಥೈಸಿಕೊಳ್ಳುವುದು**

© KTBS Not to be republished

**ಅರ್ಥ ತಿಳಿಯಿರಿ**

ಚಿಂತೆ – ಯೋಚನೆ, ಕಳವಳ; ಚರಂಡಿ – ಗಟಾರ, ಮೋರಿ; ಮಲಿನ – ಕೊಳೆ, ಹೊಲಸು

**ವಿವರ ತಿಳಿಯಿರಿ**

ಸಾರ್ವಜನಿಕ – ಸಮಾಜದಲ್ಲಿ ಎಲ್ಲರಿಗೂ ಸಂಬಂಧಿಸಿದ

ವಾತಾವರಣ – ಸುತ್ತಮುತ್ತಣ ಪರಿಸರ

## ಅಭ್ಯಾಸ

**ಅ) ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ.**

೧. ಡಾಕ್ಟರ್ ನಿನ್ನೆಯಿಂದ .................... ನೋಯುತ್ತಿದೆ.

೨. ನಿಮ್ಮ ಮನೆಗೆ ಕುಡಿಯುವ ................. ಎಲ್ಲಿಂದ ತರುತ್ತೀರಿ?

೩. ನೀವು ಕುದಿಸಿ ಆರಿಸಿದ ............. ಕುಡಿಯುತ್ತಿದ್ದೀರ.

೪. ಅಂತಹ ಆಹಾರ ಪದಾರ್ಥಗಳ ಮೇಲೆ ...................... ಕೂತಿರುತ್ತದೆ.

**ಆ) ಈ ವಾಕ್ಯಗಳಲ್ಲಿ ತಪ್ಪಾಗಿರುವ ಅಂಶಗಳನ್ನು ಗುರುತಿಸಿ, ಸರಿಪಡಿಸಿ ಬರೆಯಿರಿ.**

೧. ಮಧ್ಯಾಹ್ನ ಇಡ್ಲಿ ಚಟ್ನಿ.

..........................................................................................

೨. ಮನೆಯ ಮುಂದೆ ಸಾರ್ವಜನಿಕ ತೊಟ್ಟಿ ಇದೆ.

..........................................................................................

೩. ನಿನ್ನೆ ನೀನು ಸೇವಿಸಿದ್ದೆಲ್ಲವೂ ಒಳ್ಳೆಯ ಆಹಾರವಲ್ಲ.

..........................................................................................

೪. ನೀನು ಸ್ನಾನ ಮಾಡಿ ಶುಭ್ರವಾದ ಬಟ್ಟೆ ಧರಿಸಿ ಬಂದಿಲ್ಲ.

..........................................................................................

©KTBS Not to be republished



**ಇ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಯಾರಿಗೆ ಹೊಟ್ಟೆ ನೋವು ಬಂದಿತ್ತು?

..........................................................................................................

೨. ಹಿಂದಿನ ದಿನ ರಾತ್ರಿ ಕಾವ್ಯ ಏನನ್ನು ಸೇವಿಸಿದ್ದಳು?

..........................................................................................................

೩. ಮನೆಯ ಮುಂದಿನ ಚರಂಡಿ ಹೇಗಿತ್ತು?

..........................................................................................................

೪. ರಸ್ತೆ ಬದಿಯಲ್ಲಿ ತೆರೆದಿಟ್ಟ ತಿಂಡಿ-ತಿನಿಸನ್ನು ಏಕೆ ತಿನ್ನಬಾರದು?

..........................................................................................................



## ಭಾಷಾ ಚಟುವಟಿಕೆ

**ಅ) ಮಾದರಿಯಂತೆ ಪದ ಬದಲಾಯಿಸಿ ಬರೆಯಿರಿ.**

**ಮಾದರಿ :** ತಿಂದಿದ್ದೆ – ತಿಂದಿಲ್ಲ

೧. ಮಾಡಿದ್ದೆ – ..............................

೨. ಹೋಗಿದ್ದೆ – ..............................

೩. ನೋಡಿದ್ದೆ – ..............................

೪. ಬಂದಿದ್ದೆ – ..............................

**ಆ) ಮಾದರಿಯಂತೆ ಬರೆಯಿರಿ.**

ಮಾದರಿ : ಕೊಡ್ತೇವೆ – ಕೊಡುತ್ತೇವೆ.

೧. ಬೈತಾಳೆ – ..........................

©KTBS Not to be republished




೨. ಹೊಂದೋದಿಲ್ಲ – ........................

೩. ಕೇಳಾಕಿಲ್ಲ – ........................

೪. ಕುಡಿಯಾಕ್ – ........................

**ಇ) ಈ ಚಿತ್ರಗಳನ್ನು ನೋಡಿ ನಿಮಗೆ ಏನು ಅನ್ನಿಸುತ್ತದೆಂದು ಹೇಳಿರಿ**



## ಯೋಜನೆ

* ರೈಲ್ವೆ/ಬಸ್ ನಿಲ್ದಾಣದಲ್ಲಿ ಟಿಕೆಟ್ ಕೊಡುವವರ ಜೊತೆ ನಡೆಯಬಹುದಾದ ಸಂಭಾಷಣೆಯನ್ನು ನಿಮ್ಮ ಸ್ನೇಹಿತರ ಸಹಾಯದೊಂದಿಗೆ ಬರೆಯಿರಿ.

## ಶುಭನುಡಿ

* ಅತಿಯಾದರೆ ಅಮೃತವೂ ವಿಷವಾಗುವುದು.
* ರುಚಿಗಿಂತಲೂ ಶುಚಿ ಮುಖ್ಯ.
* ಉಪ್ಪಿಗಿಂತ ರುಚಿಯಿಲ್ಲ.

©KTBS Not to be republished


# ೧೧. ಮಸಾಲೆ ದೋಸೆ (ಪದ್ಯ)

ದೋಸೆ ದೋಸೆ ಮಸಾಲೆ ದೋಸೆ
ಹೆಂಚಿನ ಮೇಲೆ ಚುಂಯ್ ಚುಂಯ್ ದೋಸೆ
ಅಮ್ಮನು ಹುಯ್ಯುವ ಹೂವಿನ ದೋಸೆ
ಅಚ್ಚುಮೆಚ್ಚಿನ ತುಪ್ಪದ ದೋಸೆ

ಹಿಟ್ಟನು ಸೌಟಲಿ ಸರ್ರನೆ ಹುಯ್ಯಲು
ಕರ್ರನೆ ಹೆಂಚಲಿ ಬೆಳ್ಳಿಯ ದೋಸೆ
ಕಂಡರೆ ಕುಣಿವುದು ಅಪ್ಪನ ಮೀಸೆ
ತಂಗಿಗು ನನಗು ಬಲು ಆಸೆ

ಮಿರುಗುವ ಬಿಸಿಬಿಸಿ ಪಲ್ಯದ ದೋಸೆ
ಮೇಲೊಂದಿಷ್ಟು ಬೆಣ್ಣೆಯ ಪೂಸೆ
ಘಮಘಮ ಪರಿಮಳ ಸೂಸುವ ದೋಸೆ
ಮೆಲ್ಲನೆ ಮೆಲ್ಲುವ ದುಂಡನೆ ದೋಸೆ

ಇಷ್ಟ ಪಟ್ಟು ಎಷ್ಟೇ ತಿಂದರು
ಇಷ್ಟ ತೀರದ ಪುಷ್ಟಿಯ ದೋಸೆ
ಹೊಟ್ಟೆ ಮೀರಿ ಬಕಬಕ ತಿಂದರೆ
ಅರಗದೆ ಕರಗದೆ ಕಾಡುವ ದೋಸೆ



–ಟಿ.ಎಸ್. ನಾಗರಾಜ ಸೆಟ್ಟಿ

©KTBS
Not to be republished



**ಕ್ಷೇತ್ರ** – ಆಲಿಸುವುದು

**ಸಾಮರ್ಥ್ಯ** – ಪ್ರಾಸಪದ್ಯ, ಹಾಡು ಮತ್ತು ಸರಳ ಕಥೆಗಳನ್ನು ಗಟ್ಟಿಯಾಗಿ ಓದುವುದು.

**ಕವಿ–ಕೃತಿ ಕುರಿತು**

ಪ್ರೊ. ಟಿ. ಎಸ್. ನಾಗಾರಾಜ ಸೆಟ್ಟಿಯವರು ಚಿಕ್ಕಬಳ್ಳಾಪುರ ಜಿಲ್ಲೆಯ ಚಾಕವೇಲು ಗ್ರಾಮದಲ್ಲಿ ೧೯೫೧ರಲ್ಲಿ ಜನಿಸಿದರು. ತಿಪಟೂರಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿರುವ ಶ್ರೀಯುತರು ಮಕ್ಕಳ ಸಾಹಿತ್ಯಕ್ಕಾಗಿ ಬದುಕನ್ನೇ ಮುಡುಪಾಗಿಟ್ಟವರು. ತಮ್ಮ 'ನಿರ್ಮಲ ಪ್ರಕಾಶನ'ದ ಮೂಲಕ ವಿವಿಧ ಲೇಖಕರ ಐವತ್ತಕ್ಕೂ ಹೆಚ್ಚು ಮಕ್ಕಳ ಕೃತಿಗಳನ್ನು ಪ್ರಕಟಿಸಿದ್ದಾರೆ. ಇವರ 'ನವಿಲು ಗರಿ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಪ್ರಸ್ತುತ ಕವನವನ್ನು 'ನವಿಲು ಗರಿ' ಕೃತಿಯಿಂದ ಆಯ್ದುಕೊಳ್ಳಲಾಗಿದೆ.

**ಅರ್ಥ ತಿಳಿಯಿರಿ**

ಹುಯ್ಯು – ಎರೆಯು, ಹೊಯ್ಯು; ಕರ್ರನೆ – ಕಪ್ಪಗೆ; ಪೂಸು – ಹಚ್ಚು, ಲೇಪಿಸು; ಸೂಸು – ಬೀರು, ಹರಡು; ಪುಷ್ಟಿ – ಬಲಿಷ್ಠ; ಕಾಡು – ಪೀಡಿಸು, ತೊಂದರೆ ಕೊಡು; ಪಲ್ಯ – ಕಾಯಿಪಲ್ಲೆ; ಪರಿಮಳ – ಸುವಾಸನೆ, ಕಂಪು; ದುಂಡನೆ – ವೃತ್ತಾಕಾರ, ವರ್ತುಲ; ಅರಗು – ಪಚನವಾಗು, ಕರಗು.




**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ದೋಸೆ ಚುಂಯ್ ಚುಂಯ್ ಎಂದು ಯಾವುದರ ಮೇಲೆ ಸದ್ದು ಮಾಡುತ್ತದೆ?

..........................................................................................................

೨. ಅಮ್ಮ ಯಾವ ದೋಸೆ ಹುಯ್ಯುವಳು?

..........................................................................................................

೩. ಕರ್ರನೆಯ ಹೆಂಚಿನಲ್ಲಿ ಎಂತಹ ದೋಸೆ ಸಿದ್ಧವಾಗುತ್ತದೆ?

..........................................................................................................

©KTBS Not to be republished







೪. ದೋಸೆ ಕರಗದೆ ಕಾಡುವುದು ಯಾವಾಗ?

..........................................................................................................

**ಆ) ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ಆರಿಸಿ ತುಂಬಿರಿ.**

೧. ಹಿಟ್ಟನು ಸೌಟಲಿ ................ ಹೊಯ್ಯಲು

ಅ) ಕರ್ರನೆ ಆ) ಭರ್ರನೆ ಇ) ಸರ್ರನೆ ಈ) ಜರ್ರನೆ

೨. ಮೇಲೊಂದಿಷ್ಟು ................ ಪೂಸೆ

ಅ) ಎಣ್ಣೆಯ ಆ) ಬೆಣ್ಣೆಯ ಇ) ತುಪ್ಪವ ಈ) ಹಾಲನು

೩. ಮೆಲ್ಲನೆ ಮೆಲ್ಲುವ ................ ದೋಸೆ

ಅ) ದುಂಡನೆ ಆ) ಉದ್ದನೆ ಇ) ದಪ್ಪನೆ ಈ) ಸಣ್ಣನೆ

೪. .................. ತೀರದ ಪುಷ್ಟಿಯ ದೋಸೆ

ಅ) ನಷ್ಟ ಆ) ಕಷ್ಟ ಇ) ಇಷ್ಟ ಈ) ಪುಷ್ಟ

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ವಾಕ್ಯ ರಚನೆ ಮಾಡಿರಿ.**

೧. ಪರಿಮಳ : ..........................................................................

೨. ಅಚ್ಚುಮೆಚ್ಚು : ....................................................................




**ಅ) ಕೆಳಗಿನ ಪದಗಳಿಗೆ ನಕಾರಾತ್ಮಕ ರೂಪ ಕೊಡಿರಿ.**

**ಮಾದರಿ :** ಅರಗಿತು – ಅರಗಲಿಲ್ಲ

೧. ಕುಣಿಯಿತು – ........................................

©KTBS Not to be republished





೨. ಮಿರುಗಿತು – ........................................

೩. ಸೂಸಿತು – ........................................

೪. ತಿಂದರು – ........................................

**ಆ) ಮಾದರಿಯಂತೆ ಕೆಳಗಿನ ಪದಗಳಿಗೆ ಇರುವ ಭಿನ್ನ ಅರ್ಥಗಳನ್ನು ಬರೆಯಿರಿ.**

**ಮಾದರಿ :** ಕಳೆ – ಕಾಂತಿ / ಕಸ

೧. ಕುಣಿ : ..............................

೨. ಅರಗು : ..............................

೩. ಕಾಡು : ..............................

**ಇ) ಮಾದರಿಯಂತೆ ಕೆಳಗಿನ ಪದಗಳ ಅರ್ಥವ್ಯತ್ಯಾಸ ಗುರುತಿಸಿರಿ.**

**ಮಾದರಿ :** ಕೊಡು – ನೀಡು : : ಕೋಡು – ಕೊಂಬು

೧. ಬಿಸಿ – ............................

ಬೀಸಿ – ............................

೨. ಹಂಚು – ............................

ಹೆಂಚು – ............................

೩. ಮಿರುಗು – ............................

ಮರುಗು – ............................

**ಈ) ಮಾದರಿಯಂತೆ ಬಿಡಿ ಅಕ್ಷರಗಳನ್ನು ಅರ್ಥವತ್ತಾಗಿ ಜೋಡಿಸಿ ಬರೆಯಿರಿ.**

**ಮಾದರಿ :**

| | | | |
|---|---|---|---|
| ಸಿ | ಸೆ | ಬಿ | ದೋ |
| ಬಿ | ಸಿ | ದೋ | ಸೆ |

©KTBS Not to be republished



| ಗಾ | ತಂ | ಳಿ |
|---|---|---|
| | | |

| ಸಿ | ರು | ಬಿ | ನೀ |
|---|---|---|---|
| | | | |

| ಹಿ | ನು | ಸಿ | ಜೇ |
|---|---|---|---|
| | | | |

| ವ | ಸ | ರ್ಷ | ಹೊ |
|---|---|---|---|
| | | | |

**ಉ) ಕೊಟ್ಟಿರುವ ಸುಳಿವುಗಳನ್ನು ಆಧರಿಸಿ ಆವರಣದಲ್ಲಿರುವ ಪದಗಳನ್ನು ಆಯ್ದು, ಪದಬಂಧ ಪೂರ್ಣಗೊಳಿಸಿರಿ.**

| | | | | |
|---|---|---|---|---|
| ೧ | ೨ | | | |
| | ೩ | ೪ | | ೫ |
| ೬ | | | | |
| | | ೭ | | |
| | | | | ೮ |
| ೯ | | | | |

©KTBS
Not to be republished



**ಎಡದಿಂದ ಬಲಕ್ಕೆ**

೧. ಪುಷ್ಪದ ಇನ್ನೊಂದು ಹೆಸರು (೨)

೩. ಸಾಮಾನ್ಯ ರಜಾದಿನ (೪)

೭. ಬಾಣದ ಹೆಸರು ಗೊತ್ತಾ? (೨)

೮. ಕಾಶ್ಮೀರದ ಜನಪ್ರಿಯ ಹಣ್ಣು (೨)

೯. ತಾಯಿಯ ಮನೆ ಇದು (೩)

**ಮೇಲಿನಿಂದ ಕೆಳಕ್ಕೆ**

೨. ಗಿಡವಲ್ಲದ್ದು (೨)

೪. ಈ ದೇಶದಲ್ಲಿ ಇಲ್ಲದಿದ್ದರೆ? (೩)

೫. ಗಾಯವಾದರೆ ಸುರಿಯುತ್ತದೆ (೨)

೬. ಗಾಂಧೀಜಿಯವರನ್ನು ದೇಶ ಗುರುತಿಸಿದ್ದು ಹೀಗೆ (೪)

(ರಾಷ್ಟ್ರಪಿತ, ತವರು, ಸೇಬು, ಸುಮ, ವಿದೇಶ, ಮರ, ರವಿವಾರ, ಶರ, ರಕ್ತ)




ಅ) ನಿಮಗೆ ಇಷ್ಟವಾದ ತಿಂಡಿ ತಿನಿಸುಗಳ ಪಟ್ಟಿ ಮಾಡಿರಿ.

ಆ) ವಿವಿಧ ಬಗೆಯ ದೋಸೆಗಳ ಹೆಸರುಗಳನ್ನು ಬರೆಯಿರಿ.

## ಶುಭನುಡಿ

* ಆರೋಗ್ಯವೇ ಭಾಗ್ಯ
* ಊಟ ಬಲ್ಲವನಿಗೆ ರೋಗವಿಲ್ಲ, ಮಾತುಬಲ್ಲವನಿಗೆ ಜಗಳವಿಲ್ಲ.
* ಮಿತ ಆಹಾರ, ಹಿತ ವಿಹಾರ

©KTBS Not to be republished





# ೧೨. ಕರುಣೆಯ ಹಾದಿ

ಆ ಹುಡುಗ ಜನಿಸಿದ್ದು ಬಂಗಾಳದ ಕಟಕ್‌ನಲ್ಲಿ. ಜಾನಕಿನಾಥ ಬೋಸ್ ಹಾಗೂ ಪ್ರಭಾವತಿದೇವಿ ಅವರ ಒಂಬತ್ತನೆಯ ಪುತ್ರ. ಒಂದು ದಿನ ತಾಯಿ ಮಗನ ಕೊಠಡಿಗೆ ಬಂದಾಗ ಆಶ್ಚರ್ಯ ಕಾದಿತ್ತು! ಅವನ ಕಪಾಟಿನಿಂದ ಇರುವೆಗಳು ಸಾಲುಸಾಲಾಗಿ ಹರಿದು ಬರುತ್ತಿದ್ದವು. ಕಪಾಟನ್ನು ತೆರೆದು ನೋಡಿದಾಗ ಪುಸ್ತಕಗಳ ನಡುವೆ ರೊಟ್ಟಿಗಳಿದ್ದವು. ಅವನ್ನು ಅಲ್ಲಿ ಮುಚ್ಚಿಡುವ ಅಗತ್ಯ ಏನಿತ್ತು? ಎಂದು ತಾಯಿ ಯೋಚಿಸಿದಳು. ಮಗ ಬಂದ ಮೇಲೆ ಕೇಳಿದರಾಯಿತು ಅಂದುಕೊಂಡಳು. ಶಾಲೆಯಿಂದ ಬಂದ ಮೇಲೆ ಮಗನನ್ನು ಕೇಳಿದಳು.

"ಮಗೂ, ನೀನು ರೊಟ್ಟಿಗಳನ್ನು ಕಪಾಟಿನಲ್ಲಿ ಏಕೆ ಮುಚ್ಚಿಟ್ಟಿದ್ದೆ?"

ಆಗ ಮಗ ಅಳುತ್ತಾ, "ಅಮ್ಮಾ ಇನ್ನು ಆ ರೊಟ್ಟಿಗಳ ಅಗತ್ಯವಿಲ್ಲ. ತೆಗೆದು ಎಸೆದುಬಿಡು" ಎಂದು ಹೇಳಿದನು. ಮಗ ಅಳುತ್ತಿರುವುದನ್ನು ಕಂಡು ತಾಯಿಯ ಮನಸ್ಸು ಮರುಗಿತು.

"ಮಗು ಏಕೆ ಅಳುತ್ತಿರುವೆ?" ಎಂದು ಕೇಳಿದರು. ಆಗ ಮಗ, "ಅಮ್ಮಾ, ಪ್ರತಿದಿನ ನನ್ನ ಊಟದಿಂದ ರೊಟ್ಟಿ ತೆಗೆದಿಟ್ಟು ಒಬ್ಬ ಭಿಕ್ಷುಕಿಗೆ ಕೊಡುತ್ತಿದ್ದೆ. ಆದರೆ ಈ ಎರಡು



Not to be republished ©KTBS

ದಿನಗಳಿಂದ ಆ ಜಾಗದಲ್ಲಿ ಅವಳು ಕಾಣಿಸಲಿಲ್ಲ. ಇನ್ನು ಕಾಣಿಸುವ ಯಾವ ಲಕ್ಷಣವೂ ಇಲ್ಲ" ಎಂದು ಹೇಳುವಾಗ ಅವನ ಗಂಟಲು ಕಟ್ಟಿತು. ಮಗನ ಮಾತನ್ನು ಕೇಳಿದ ತಾಯಿಯ ಹೃದಯ ತುಂಬಿ ಬಂತು. ಬಡವರ ಕಷ್ಟಕ್ಕೆ ಸ್ಪಂದಿಸುವ ನಿನ್ನಂತಹ ಕರುಣಾಮಯಿ ಮಗನನ್ನು ಪಡೆದ ನಾನೇ ಧನ್ಯೆ ಎಂದುಕೊಂಡು ಸಂತೋಷಪಟ್ಟಳು. "ಕೀರ್ತಿವಂತನಾಗಿ ಬಾಳು" ಎಂದು ಮನಸಾರೆ ಹರಸಿದಳು.

ಅದೇ ಬಾಲಕ ಮುಂದೆ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಬ್ರಿಟಿಷರ ಕೈಯಲ್ಲಿ ಸಿಲುಕಿದ ಭಾರತಮಾತೆಯ ಪರಿಸ್ಥಿತಿಯನ್ನು ಕಂಡು ಅವರ ಹೃದಯ ಮರುಗಿತು. ಶತ್ರುವನ್ನು ಸದೆಬಡಿಯಲು ಕ್ರಾಂತಿಯ ಮಾರ್ಗವನ್ನು ಅನುಸರಿಸಿದರು. ಹೂವಿನಂತೆ ಮೃದುವಾದ ಅವರ ಮನಸ್ಸು ವಜ್ರದಂತೆ ಕಠಿಣವಾಗಲೂ ಬಲ್ಲುದು ಎಂಬುದನ್ನು ಸಾಧಿಸಿ ತೋರಿಸಿದರು. ವಿದೇಶದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಸೈನ್ಯ ಕಟ್ಟಿದರು. ಅವರೇ ನಮ್ಮ ಧೀರನಾಯಕ 'ಸುಭಾಷ್ ಚಂದ್ರಬೋಸ್.'



**(ಸಂಗ್ರಹ)**

**ಕ್ಷೇತ್ರ – ಆಲಿಸುವುದು**

**ಸಾಮರ್ಥ್ಯ – ಆಲಿಸಿದ ಅನಂತರ ಯಾರು? ಯಾವಾಗ ? ಎಲ್ಲಿ ? ಏನು? ಪ್ರಶ್ನೆಗಳಿಗೆ ಉತ್ತರಿಸುವುದು.**

**ಅರ್ಥ ತಿಳಿಯಿರಿ**

ಕಪಾಟು – ಬೀರು, ಅಲಮಾರು; ಮರುಗು – ಮನಸ್ಸು ಕರಗು, ಸಂಕಟಪಡು; ಸ್ಪಂದಿಸು – ಮಿಡಿಯು, ವಿಶ್ವ ವಿಖ್ಯಾತ – ಜಗತ್ ಪ್ರಸಿದ್ಧ.

**ವಿವರ ತಿಳಿಯಿರಿ**

ಹೃದಯ ತುಂಬಿ – ಮನಸ್ಸು ಪ್ರೀತಿಯಿಂದ ತುಂಬಿ.

ಗಂಟಲು ಕಟ್ಟು – ಮಾತು ಬಾರದಂತಾಗು.

ಸ್ವಾತಂತ್ರ್ಯ ಚಳುವಳಿ – ಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ನಡೆಸುವ ಹೋರಾಟ.

©KTBS Not to be republished



## ಅಭ್ಯಾಸ

**ಅ) ಆವರಣದಲ್ಲಿನ ಸೂಕ್ತ ಪದವನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.**

೧. ಕಪಾಟಿನಿಂದ ...................... ಗಳು ಸಾಲುಸಾಲಾಗಿ ಹರಿದು ಬರುತ್ತಿದ್ದವು.
(ಜಿರಳೆ, ಜೇಡ, ಇರುವೆ)

೨. ಕಪಾಟನ್ನು ತೆರೆದು ನೋಡಿದಾಗ ಪುಸ್ತಕಗಳ ನಡುವೆ ................ ಗಳಿದ್ದವು.
(ರೊಟ್ಟಿ, ಚಪಾತಿ, ದೋಸೆ)

೩. ನಿನ್ನಂತಹ ...................... ಮಗನನ್ನು ಪಡೆದ ನಾನೇ ಧನ್ಯೆ.
(ಕ್ರಾಂತಿಕಾರಿ, ಕರುಣಾಮಯಿ, ಪ್ರೇಮಮಯಿ)

**ಆ) ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ.**

೧. ತಾಯಿ, ಮಾತೆ, ಮಗಳು, ಜನನಿ : ................................

೨. ಸಂತೋಷ, ದುಃಖ, ಆನಂದ, ಖುಷಿ : ................................

೩. ರೊಟ್ಟಿ, ದೋಸೆ, ಉಪ್ಪಿಟ್ಟು, ಕಿತ್ತಳೆ : ................................

೪. ಹರಸು, ಸೋಲಿಸು, ಹಾರೈಸು, ಆಶೀರ್ವದಿಸು : ................................

**ಇ) ಈ ಮಾತನ್ನು ಯಾರು ಯಾರಿಗೆ ಹೇಳಿದರು?**

೧. "ರೊಟ್ಟಿಗಳನ್ನು ಕಪಾಟಿನಲ್ಲಿ ಏಕೆ ಮುಚ್ಚಿಟ್ಟಿದ್ದೆ?"

ಯಾರು ಹೇಳಿದರು? : ..........................................................................

ಯಾರಿಗೆ ಹೇಳಿದರು? : ..........................................................................

೨. "ಇನ್ನು ಆ ರೊಟ್ಟಿಗಳ ಅಗತ್ಯವಿಲ್ಲ, ತೆಗೆದು ಎಸೆದು ಬಿಡು"

ಯಾರು ಹೇಳಿದರು? : ..........................................................................

ಯಾರಿಗೆ ಹೇಳಿದರು? : ..........................................................................

೩. "ಮಗು ಏಕೆ ಅಳುತ್ತಿರುವೆ?"

ಯಾರು ಹೇಳಿದರು? : ..........................................................................

ಯಾರಿಗೆ ಹೇಳಿದರು? : ..........................................................................

©KTBS Not to be republished





**ಈ) ಆವರಣದಲ್ಲಿ ಕೊಟ್ಟಿರುವ ಪದಗಳ ಸಹಾಯದಿಂದ ಸರಿಯಾದ ಪ್ರಶ್ನೆಗಳನ್ನು ರಚಿಸಿರಿ.**

(ಎಲ್ಲಿ, ಏನು, ಯಾರಿಗೆ, ಯಾವಾಗ)

೧. ರೊಟ್ಟಿಗಳನ್ನು .................... ಕೊಡಬೇಕಾಗಿತ್ತು?

೨. ಪುಸ್ತಕಗಳನ್ನು ...................... ಇಟ್ಟಿರುವೆ?

೩. ಆ ಪೆಟ್ಟಿಗೆಯಲ್ಲಿರುವುದು .................. ?

೪. ಮಕ್ಕಳು ತರಗತಿಗೆ .................... ಬಂದರು?

**ಉ) ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಬಾಲಕನ ತಂದೆ ತಾಯಿಯವರ ಹೆಸರೇನು?

........................................................................................................

೨. ಬಾಲಕ ರೊಟ್ಟಿಗಳನ್ನು ಯಾರಿಗೆ ಕೊಡುತ್ತಿದ್ದನು?

........................................................................................................

೩. ತಾಯಿ ಏನೆಂದು ಹರಸಿದಳು?

........................................................................................................

೪. ಆ ಧೀರ ನಾಯಕ ಯಾರು?

........................................................................................................

**ಊ) ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಏಕೆ ಅಳುತ್ತಿರುವೆ? ಎಂದು ತಾಯಿ ಕೇಳಿದಾಗ ಮಗನು ಕೊಟ್ಟ ಉತ್ತರವೇನು?

........................................................................................................

........................................................................................................

........................................................................................................

©KTBS Not to be republished





೨. ಸುಭಾಷ್‌ಚಂದ್ರ ಬೋಸರ ಬಗ್ಗೆ ನಿಮಗೆ ಗೊತ್ತಿರುವ ವಿವರಗಳನ್ನು ಬರೆಯಿರಿ.

.......................................................................................................

.......................................................................................................

.......................................................................................................

## ಅಭ್ಯಾಸ ಚಟುವಟಿಕೆ

**ಅ) ಕೊಟ್ಟಿರುವ ಗಾದೆ ಮಾತುಗಳನ್ನು ಪೂರ್ಣಗೊಳಿಸಿರಿ.**

೧. ಕಾಯಕವೇ ................................

೨. ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ................................

೩. ಕೈಕೆಸರಾದರೆ ................................

೪. ಒಗ್ಗಟ್ಟಿನಲ್ಲಿ ................................

## ಯೋಜನೆ

ಅ) ಸ್ವಾತಂತ್ರ್ಯ ಹೋರಾಟಗಾರರ ಚಿತ್ರಗಳನ್ನು ಸಂಗ್ರಹಿಸಿ, ಚಿತ್ರಕೋಶ ತಯಾರಿಸಿರಿ.

ಆ) ಸುಭಾಷ್ ಚಂದ್ರ ಬೋಸರ ಜೀವನ ಚರಿತ್ರೆಯನ್ನು ಕೇಳಿ, ಓದಿ ತಿಳಿಯಿರಿ.

### ಶುಭನುಡಿ

* ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿ ಕಾಣು.
* ತುಂಬಿದ ಕೊಡ ತುಳುಕುವುದಿಲ್ಲ.
* ದೇಶ ಸೇವೆಯೇ ಈಶ ಸೇವೆ.

©KTBS Not to be republished



# ೧೩. ಮಂಗನ ನ್ಯಾಯ (ಪದ್ಯ)

ಜೋಡಿಬೆಕ್ಕು ಕೂಡಿಕೊಂಡು
ಬೆಣ್ಣೆ ಗಡಿಗೆ ತಂದವು
ನನಗೆ ಹೆಚ್ಚು ತನಗೆ ಹೆಚ್ಚು
ಎನುತ ಜಗಳ ಕಾದವು

ಹೊಂಚು ಹಾಕಿ ಕುಟಿಲ ಮಂಗ
ನ್ಯಾಯ ಹೇಳ ಬಂದಿತು
ತೂಕ ಮಾಡಿ ಕೊಡುವೆ ನಾನು
ಪರಡಿ ತನ್ನಿ ಎಂದಿತು

ಆಚೆ ಈಚೆ ಬೆಣ್ಣೆ ಹಚ್ಚಿ
ಪರಡಿ ತೂಗಿ ನೋಡಿತು
ಅದಕೆ ಹೆಚ್ಚು ಇದಕೆ ಹೆಚ್ಚು
ಎನುತ ಗುಳುಂ ನುಂಗಿತು

ಹಾಗು ಹೀಗು ಮಾಡಿ ಮಂಗ
ತಾನೇ ತಿಂದು ತೇಗಿತು
ಗಡಿಗೆ ಒಡೆದು ಪರಡಿ ಚೆಲ್ಲಿ
ಗಿಡದ ಮೇಲೆ ಹಾರಿತು

ನಮ್ಮ ಜಗಳದಿಂದ ಬೆಣ್ಣೆ
ಪರರ ಸೊತ್ತು ಆಯಿತು
ಜೋಡಿ ಬೆಕ್ಕು ಜಗಳ ಸಲ್ಲ
ಎನುತ ಮರಳಿ ನಡೆದವು

(ಸಂಗ್ರಹ)



©KTBS Not to be republished





**ಕ್ಷೇತ್ರ** – ಓದುವುದು

**ಸಾಮರ್ಥ್ಯ** – ಸುಮಾರು ಒಂದು ಸಾವಿರ ಪದ ಗ್ರಹಿಸುವುದು

**ಅರ್ಥ ತಿಳಿಯಿರಿ**

ಗಡಿಗೆ – ಮಣ್ಣಿನ ಪಾತ್ರೆ; ಜಗಳ – ಕಲಹ, ಕಿತ್ತಾಟ; ನ್ಯಾಯ – ಕಾನೂನು, ನೀತಿ–ನಿಯಮ; ಕುಟಿಲ – ವಂಚನೆ, ಮೋಸ; ಪರಡಿ –ತಕ್ಕಡಿ; ಪರರು – ಅನ್ಯರು, ಹೊರಗಿನವರು; ಸೊತ್ತು – ಸ್ವತ್ತು, ವಸ್ತು

**ವಿವರ ತಿಳಿಯಿರಿ**

ಬೆಣ್ಣೆ – ಮೊಸರನ್ನು ಕಡೆಯುವುದರಿಂದ ಸಿಗುವ ಸಾರರೂಪದ ಬಿಳಿಯ ಪದಾರ್ಥ

ಹೊಂಚು ಹಾಕು – ತಕ್ಕ ಸಮಯಕ್ಕೆ ಕಾಯು

ಗುಳುಂ ನುಂಗು – ಆಹಾರವನ್ನು ಸದ್ದಿನೊಂದಿಗೆ ನುಂಗುವುದು.



## ಅಭ್ಯಾಸ

**ಅ) ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಆರಿಸಿ ಬರೆಯಿರಿ.**

**ಉದಾಹರಣೆ :** ತಂದವು – ಕಾದವು

೧. ಬಂದಿತು – ..........................................

೨. ನೋಡಿತು – ..........................................

೩. ತೇಗಿತು – ..........................................

**ಆ) ಪದಗಳ ಅರ್ಥ ಬರೆಯಿರಿ**

ಗಡಿಗೆ – ..........................................

ಪರಡಿ – ..........................................

ಕುಟಿಲ – ..........................................

ಜಗಳ – ..........................................

©KTBS Not to be republished





**ಇ) ಪದ್ಯಭಾಗವನ್ನು ಪೂರ್ಣ ಮಾಡಿರಿ.**

ಜೋಡಿಬೆಕ್ಕು ........................

...............................ತಂದವು

ನನಗೆ ಹೆಚ್ಚು .........................

............................... ಕಾದವು.

**ಈ) ಈ ವಾಕ್ಯಗಳಲ್ಲಿ ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

ಅ) ಹೊಂಚು ಹಾಕಿ ಕುಟಿಲ ಮಂಗ ................... ಹೇಳ ಬಂದಿತು

ಆ) ಪರಡಿ ಚೆಲ್ಲಿ ...................... ಮೇಲೆ ಹಾರಿತು.

ಇ) ನಮ್ಮ ಜಗಳದಿಂದ ....................... ಪರರ ಸೊತ್ತು ಆಯಿತು

**ಉ) ಈ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿರಿ.**

೧) ಜೋಡಿಬೆಕ್ಕುಗಳು ಏನನ್ನು ತಂದವು?

.......................................................................................................

೨) ಜಗಳದಿಂದ ಬೆಣ್ಣೆ ಯಾರ ಸೊತ್ತಾಯಿತು?

.......................................................................................................

೩) ಜೋಡಿಬೆಕ್ಕು ಯಾವುದು ಸಲ್ಲ ಎನ್ನುತ್ತ ನಡೆದವು?

.......................................................................................................




**ಅ) ಕೊಟ್ಟಿರುವ ಅಕ್ಷರಗಳಿಂದ ಪ್ರಾರಂಭವಾಗುವ ಒಂದಕ್ಕಿಂತ ಹೆಚ್ಚು ಪದಗಳನ್ನು ಬರೆಯಿರಿ**

೧. ಅ : .......................................................................................

೨. ಐ : .........................................................................................

©KTBS Not to be republished





೩. ಜ : ..........................................................................................

೪. ನ : ..........................................................................................

೫. ಶ : ..........................................................................................

ಆ) ಚೌಕಗಳಲ್ಲಿರುವ ಅಕ್ಷರಗಳನ್ನು ಸೇರಿಸಿ ಹತ್ತಕ್ಕೂ ಹೆಚ್ಚು ಅರ್ಥವತ್ತಾದ ಪದಗಳನ್ನು ರಚಿಸಿ, ಜಾಣರಾಗಿರಿ.

| | | | | | |
|---|---|---|---|---|---|
| ಕ | ರ | ಗ | ಪ | ಲ್ಲ | ವಿ |
| ವಿ | ನ್ನ | ರು | ರ್ವ | ಟ | ರಾ |
| ಪ | ವಾ | ಡ | ಮ | ಯ | ಟ |
| ತ | ರ | ಗು | ರು | ಜ | ಗ |
| ನ | ವೀ | ನ | ಮೈ | ಸೂ | ರು |

.................................................... ....................................................

.................................................... ....................................................

.................................................... ....................................................

.................................................... ....................................................

.................................................... ....................................................



.................................................... ....................................................

.................................................... ....................................................

.................................................... ....................................................

©KTBS Not to be republished

## ಇ) ಚುಕ್ಕಿಗಳನ್ನು ಸೇರಿಸಿ ಚಿತ್ರ ಪೂರ್ಣ ಮಾಡಿ ಸರಿ ಹೊಂದುವ ಬಣ್ಣ ತುಂಬಿರಿ

### ಯೋಜನೆ

## ಈ) ನಿಮಗೆ ಗೊತ್ತಿರುವ ಪ್ರಾಣಿಗಳ ಹೆಸರುಗಳನ್ನು ಬರೆಯಿರಿ

| ಸಾಕು ಪ್ರಾಣಿಗಳು | ಕಾಡು ಪ್ರಾಣಿಗಳು |
|---|---|
| ................................................ | ................................................ |
| ................................................ | ................................................ |
| ................................................ | ................................................ |
| ................................................ | ................................................ |
| ................................................ | ................................................ |
| ................................................ | ................................................ |

### ಶುಭನುಡಿ

* ಇಬ್ಬರ ಜಗಳ ಮೂರನೆಯವರಿಗೆ ಲಾಭ
* ಅನ್ಯಾಯದ ಬದುಕು ನಮಗೆ ಬೇಡ
* ಕಣ್ಣಾರೆ ಕಂಡರೂ ಪರಾಂಬರಿಸಿ ನೋಡು.

©KTBS Not to be republished

## ೧೪. ಯಾರು ಹೆಚ್ಚು?

ಗುರುಪುರದಲ್ಲಿ ಅಂದು ಹಬ್ಬದ ದಿನ. ಮಳೆ-ಬೆಳೆ ಉತ್ತಮವಾಗಿ ಆಗಿದ್ದುದರಿಂದ ಎಲ್ಲರ ಮೊಗದಲ್ಲಿ ಸಂತೃಪ್ತಿ ತುಂಬಿತ್ತು. ಊರಿನ ಜನರೆಲ್ಲರೂ ತಮ್ಮತಮ್ಮ ಮನೆಗಳನ್ನು ತಳಿರು-ತೋರಣಗಳಿಂದ ಶೃಂಗಾರ ಮಾಡಿದ್ದರು. ಮನೆಗಳ ಮುಂದೆ ಬಣ್ಣಬಣ್ಣದ ರಂಗೋಲಿ ಹಾಕಿದ್ದರು. ಬಗೆಬಗೆಯ ವಿಶೇಷ ಅಡುಗೆ ಎಲ್ಲರ ಮನೆಗಳಲ್ಲಿ ತಯಾರಾಗುತ್ತಿತ್ತು. ಘಮಘಮ ಪರಿಮಳ ಎಲ್ಲೆಡೆ ಹರಡಿತ್ತು.

ಇದನ್ನೆಲ್ಲ 'ನೀರು' ಗಮನಿಸುತ್ತಿತ್ತು. "ಊರಿನ ಸಂಭ್ರಮಕ್ಕೆ ನಾನೇ ಕಾರಣ. ಇದನ್ನು ನನ್ನ ಸ್ನೇಹಿತರಿಗೆ ಈಗಲೇ ಹೇಳಬೇಕು" ಎಂದು ಜಂಬದಿಂದ ಬೀಗಿತು. ಗೆಳೆಯರಾದ ಗಾಳಿ, ಆಹಾರ, ಉಡುಪು ಮತ್ತು ಮನೆಗಳನ್ನು ಕರೆಯಿತು. ಎಲ್ಲವೂ ಊರಿನ ಚಾವಡಿಯಲ್ಲಿ ಸಭೆ ಸೇರಿದವು. 'ನೀರು' ಸ್ನೇಹಿತರಿಗೆ ಸ್ವಾಗತ ಕೋರಿ ಮಾತು ಪ್ರಾರಂಭಿಸಿತು.

**ನೀರು** : ಗೆಳೆಯರೆ, ಇಂದು ನಮ್ಮ ಊರಿನಲ್ಲಿ ಎಲ್ಲೆಡೆ ನೋಡಿದರೂ ಹಬ್ಬದ ಸಡಗರ. ಇದಕ್ಕೆ ಕಾರಣ ಯಾರು ಗೊತ್ತೆ? ಅದು ನಾನೆ!

**ಮನೆ** : ನೀನಾ! ಹೇಗೆ ಕಾರಣವಾಗುತ್ತೀಯ ಮಿತ್ರ?




©KTBS Not to be republished



**ನೀರು**  : ಜೀವಿಗಳು ನೀರು ಕುಡಿಯದಿದ್ದರೆ ಬದುಕಲು ಸಾಧ್ಯವೇ ಇಲ್ಲ. ಮನೆಗಳನ್ನು ಸ್ವಚ್ಛಗೊಳಿಸಲು ನಾನು ಬೇಕು. ಸ್ನಾನ ಮಾಡಲು, ಬಟ್ಟೆ ಒಗೆಯಲು ನಾನಿರಲೇ ಬೇಕು. ಬಗೆಬಗೆಯ ಅಡುಗೆ ತಯಾರಿಸಲು, ದವಸಧಾನ್ಯ ಬೆಳೆಯಲು ಬೇಕು. ವಿದ್ಯುತ್ ಉತ್ಪಾದಿಸಲು ನಾನು ಬೇಕು. ಈ ಎಲ್ಲಾ ಕಾರಣಗಳಿಂದ ನಾನೇ ಹೆಚ್ಚು. ಇದನ್ನು ನೀವೆಲ್ಲರೂ ಒಪ್ಪುವಿರಿ ತಾನೆ?

**ಆಹಾರ**  : ನಾನು ಒಪ್ಪುವುದಿಲ್ಲ ಗೆಳೆಯ. ಜೀವಿಗಳು ಒಂದು ಹೊತ್ತು ಆಹಾರ ಸೇವಿಸದಿದ್ದರೆ ಸುಸ್ತಾಗಿ ಬಿದ್ದು ಹೋಗುತ್ತವೆ. ಜೀವಿಗಳ ಬೆಳವಣಿಗೆಗೆ ನಾನು ಬೇಕು. ಅವುಗಳಿಗೆ ಶಕ್ತಿ ಬೇಕಾದರೆ, ರೋಗರುಜಿನಗಳಿಂದ ರಕ್ಷಣೆ ಪಡೆಯಬೇಕಾದರೆ ಪೌಷ್ಟಿಕ ಆಹಾರ ಬೇಕು. ನಾನಿಲ್ಲದಿದ್ದರೆ ಇಂದಿನ ಹಬ್ಬವೇ ನಡೆಯುವುದಿಲ್ಲ; ಗೊತ್ತಾ?

**ಮನೆ**  : ಸ್ನೇಹಿತರೆ, ಜೀವಿಗಳು ಕತ್ತಲಾಗುತ್ತಲೇ ತಮ್ಮ ವಾಸಸ್ಥಾನವಾದ ಮನೆ, ಗೂಡು, ಗುಹೆ, ಪೊಟರೆ, ಬಿಲಗಳಿಗೆ ಓಡೋಡಿ ಬರುತ್ತವೆ. ನಾನು ಅವುಗಳಿಗೆ ಆಶ್ರಯ ನೀಡುತ್ತೇನೆ. ಮಳೆ, ಗಾಳಿ, ಕಳ್ಳರು, ಶತ್ರುಗಳಿಂದ ರಕ್ಷಣೆ ನೀಡುತ್ತೇನೆ. ಅವುಗಳ ವಂಶಾಭಿವೃದ್ಧಿಗೆ ಬೇಕಾದ ಮೊಟ್ಟೆ ಮತ್ತು ಮರಿಗಳನ್ನು ಜೋಪಾನ ಮಾಡುತ್ತೇನೆ. ಈ ಗುರುಪುರದ ಮನೆಗಳನ್ನೇ ನೋಡಿ! ಇವೆಲ್ಲವನ್ನ ನೋಡಿದರೆ ನಿಮಗೆ ನಾನೇ ಹೆಚ್ಚು ಅನಿಸುವುದಿಲ್ಲವೆ?

**ಉಡುಪು**  : ಅಯ್ಯಾ ಮಿತ್ರರೆ, ನಿಮ್ಮ ಮಾತುಗಳನ್ನು ಕೇಳಿ ನನಗೆ ನಗು ಬರುತ್ತಿದೆ. ಅಂಗಳದಲ್ಲಿ ಆಡುತ್ತಿರುವ ಪುಟ್ಟ ಪುಟ್ಟ ಮಕ್ಕಳನ್ನು ನೋಡಿ, ರೇಷ್ಮೆ ಲಂಗ ರವಿಕೆ ತೊಟ್ಟು ಮೊಗ್ಗಿನ ಜಡೆ, ಕೈ ತುಂಬ ಬಳೆ, ಕಾಲಿಗೆ ಗೆಜ್ಜೆ, ಹಣೆಯಲ್ಲಿ ಬೊಟ್ಟು ಇಟ್ಟುಕೊಂಡು ಮುದ್ದಾಗಿ ಕಾಣುತ್ತಿವೆ. ಊರಿನ ಮನೆ ಮಂದಿಯೆಲ್ಲ ತಮಗೊಪ್ಪುವ ಉಡುಪುಗಳನ್ನು ಧರಿಸಿ ಹಬ್ಬ ಆಚರಿಸುತ್ತಿದ್ದಾರೆ. ಒಂದು ವೇಳೆ ಇವರಿಗೆ ಉಡುಪು ಇಲ್ಲದೇ ಇರುತ್ತಿದ್ದರೆ? – ಈಗ ಅರ್ಥವಾಯಿತೇ ಇವರೆಲ್ಲರ ಸಂತೋಷಕ್ಕೆ ನಾನೇ ಕಾರಣಾಂತ?

(ಎಲ್ಲರ ಮಾತುಗಳನ್ನು ಕೇಳಿಸಿಕೊಂಡ ಗಾಳಿಯು ಹುಸಿನಗೆ ಬೀರುತ್ತಾ)

**ಗಾಳಿ**  : ಅಣ್ಣಂದಿರೆ ನಿಮ್ಮ ಮಾತು ಸತ್ಯ. ಜೀವಿಗಳು ಈ ಭೂಮಿಯ ಮೇಲೆ ಬದುಕಲು ಸುಖ ಸಂತೋಷದಿಂದಿರಲು ನೀವೆಲ್ಲರೂ ಬೇಕೇ ಬೇಕು. ಆದರೆ ಜೀವಿಗಳು ಉಸಿರಾಡಲು ಗಾಳಿ ಇಲ್ಲದಿದ್ದರೆ ಏನು ಗತಿ ಹೇಳಿ? ಗಿಡಮರಗಳು ಬದುಕುತ್ತವೆಯೇ? ಜೀವಿಗಳ ಉಸಿರಾಟ ಅರೆಕ್ಷಣ ನಿಂತರೆ ಏನಾಗುತ್ತದೆ?

©KTBS Not to be republished






ನಾವೆಲ್ಲರೂ ನಮ್ಮ ನಮ್ಮ ಪಾಲಿನ ಕರ್ತವ್ಯ ಮಾಡುತ್ತಿದ್ದೇವೆ. ಈ ಜಗತ್ತಿನ ಪ್ರತಿಯೊಂದು ವಸ್ತು, ಜೀವಿಗಳಲ್ಲಿ ಪರಸ್ಪರ ವ್ಯತ್ಯಾಸವಿದೆ. ಆದರೆ ಎಲ್ಲವೂ ಸಮಾನ.

ನೀರು, ಆಹಾರ, ಮನೆ, ಉಡುಪು ಮತ್ತು ಗಾಳಿಯ ಮಾತುಗಳನ್ನು ಸನಿಹದಲ್ಲೆ ಕುಳಿತಿದ್ದ 'ವಿದ್ಯೆ' ಒಪ್ಪಿಕೊಂಡು ತಲೆದೂಗಿತು. ಸ್ನೇಹಿತರ ಮಾತುಗಳಿಗೆ ತನ್ನ ಒಂದು ಮಾತನ್ನು ಸೇರಿಸಿತು.

**ವಿದ್ಯೆ :** ಗೆಳೆಯರೇ, 'ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಮಾತನ್ನು ನೀವೆಲ್ಲ ಕೇಳಿದ್ದೀರಲ್ಲ. ಅಂತೆಯೇ ಎಲ್ಲರೂ ವಿದ್ಯಾವಂತರಾಗಬೇಕು. ಆಗ ನಮ್ಮ ಬಾಯಿಂದ ಯಾವುದೇ ಅಹಂಕಾರದ ಮಾತುಗಳು ತುಳುಕಲಾರವು. ಆದ್ದರಿಂದ ನಾನು ಹೇಳುವುದು ಒಂದೆ: ಎಲ್ಲರೂ ವಿದ್ಯಾವಂತರಾಗೋಣ. ಸಮಾನತೆಯಿಂದ ಬದುಕೋಣ.



ಎಲ್ಲರೂ 'ಹೌದು, ಹೌದು' ಎಂದು ಹೇಳುತ್ತಾ ಕೈಕೈ ಹಿಡಿದುಕೊಂಡು ಹಬ್ಬದ ಸಡಗರದಲ್ಲಿ ಪಾಲುಗೊಂಡವು.

**ಕ್ಷೇತ್ರ** – **ಮಾತನಾಡುವುದು**

**ಸಾಮರ್ಥ್ಯ** – **ಪರಿಚಿತ ವಸ್ತುಗಳನ್ನು ಕುರಿತು ಸಹಪಾಠಿಗಳೊಡನೆ ಮಾತನಾಡುವುದು/ ಚರ್ಚಿಸುವುದು.**

**ಅರ್ಥ**

ಮೊಗ – ಮುಖ; ಸಂತೃಪ್ತಿ – ಸಂತೋಷ, ನೆಮ್ಮದಿ; ಶೃಂಗಾರ – ಅಲಂಕಾರ, ಸಿಂಗಾರ; ಸಂಭ್ರಮ – ಸಡಗರ; ಉಡುಪು–ಉಡುವ ಬಟ್ಟೆ; ಕೋರು–ಬಯಸು; ದವಸ–ಕಾಳು; ಉತ್ಪಾದಿಸು–ತಯಾರಿಸು; ಸುಸ್ತಾಗು–ಆಯಾಸಗೊಳ್ಳು; ರೋಗರುಜನಿ–ಕಾಯಿಲೆ; ಪೌಷ್ಟಿಕ – ಪುಷ್ಟಿಕೊಡುವ; ಗಟ್ಟಿಮುಟ್ಟುತನ ಕೊಡುವ; ಗೂಡು–ಪೊಟರೆ, ವಾಸಸ್ಥಾನ, ಜೋಪಾನ – ಎಚ್ಚರಿಕೆ, ರಕ್ಷಣೆ; ಕರ್ತವ್ಯ – ಮಾಡಲೇಬೇಕಾದ ಕೆಲಸ

**ವಿವರ ತಿಳಿಯಿರಿ**

ತಳಿರು–ತೋರಣ : (ಮಾವಿನ) ಚಿಗುರೆಲೆಗಳಿಂದ ಮಾಡಿದ ಮಾಲೆ.

ರಂಗೋಲಿ : ಹಿಟ್ಟು ಮೊದಲಾದವುಗಳಿಂದ ನೆಲದ ಮೇಲೆ ಮೂಡಿಸಿದ ಚಿತ್ರ.

ಗುಹೆ : ಹುಲಿಗಳಂತಹ ಪ್ರಾಣಿಗಳು ವಾಸಿಸುವ ಜಾಗ.

©KTBS Not to be republished



ಬಿಲ : ಇಲಿ, ಹಾವು ಮೊದಲಾದ ಪ್ರಾಣಿಗಳು ವಾಸಿಸುವ ನೆಲದ ತೂಬು.
ವಂಶಾಭಿವೃದ್ಧಿ : ಸಂತಾನ ಬೆಳೆದು ಅವುಗಳ ಸಂಖ್ಯೆ ಹೆಚ್ಚುವುದು.
ಚಾವಡಿ : ಗ್ರಾಮಸ್ತರು ಪಂಚಾಯಿತಿ ಸೇರುವ ಸ್ಥಳ, ಗ್ರಾಮ ಕಛೇರಿ.

## ಅಭ್ಯಾಸ

**ಅ) ಖಾಲಿಬಿಟ್ಟ ಸ್ಥಳಗಳಲ್ಲಿ ಸೂಕ್ತ ಪದ ತುಂಬಿರಿ.**

೧) ಮನೆಗಳನ್ನು ತಳಿರುತೋರಣಗಳಿಂದ ................................ ಮಾಡಿದ್ದರು.

೨) ಜೀವಿಗಳು ನೀರು ಕುಡಿಯದಿದ್ದರೆ ................................ ಸಾಧ್ಯವೇ ಇಲ್ಲ.

೩) ಮಳೆ, ಗಾಳಿ, ಕಳ್ಳರು, ಶತ್ರುಗಳಿಂದ ................................ ನೀಡುತ್ತೇನೆ.

೪) ಗೆಳೆಯರೆ, ತುಂಬಿದ ........................... ತುಳುಕುವುದಿಲ್ಲ.

**ಆ) ಈ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ.**

೧) ಸ್ನಾನ ........................

೨) ಗಾಳಿ ......................

೩) ಮನೆ ........................

೪) ಸ್ನೇಹಿತ ......................

**ಇ) ಈ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ.**

೧) ಸಂತೋಷ X ................................

೨) ಸತ್ಯ X................................

೩) ಸಮಾನ X................................

**ಈ) ಈ ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿರಿ.**

೧) ಶುಭಾಶಯ : ................................................................................

................................................................................................

©KTBS Not to be republished







೨) ಹೊಸಬಟ್ಟೆ : ..............................................................................................

..............................................................................................................

೩) ಕರ್ತವ್ಯ : ..............................................................................................

..............................................................................................................

೪) ರಕ್ಷಣೆ : ..............................................................................................

..............................................................................................................

**ಉ) ಈ ಮಾತುಗಳನ್ನು ಯಾರು ಹೇಳಿದರು? ಬರೆಯಿರಿ.**

೧) "ಇದಕ್ಕೆ ಕಾರಣ ಯಾರು ಗೊತ್ತೆ?"

..............................................................................................................

೨) "ನಾನಿಲ್ಲದಿದ್ದರೆ ಇಂದಿನ ಹಬ್ಬವೇ ನಡೆಯುವುದಿಲ್ಲ; ಗೊತ್ತಾ?"

..............................................................................................................

೩) "ಜೀವಗಳಿಗೆ ಅರೆಕ್ಷಣ ಉಸಿರಾಟ ನಿಂತರೆ ಏನಾಗುತ್ತದೆ?"

..............................................................................................................

**ಊ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧) ಊರಿನ ಜನರು ಮನೆಗಳನ್ನು ಹೇಗೆ ಶೃಂಗಾರ ಮಾಡಿದ್ದರು?

..............................................................................................................

೨) ಎಲ್ಲವೂ ಎಲ್ಲಿ ಸಭೆ ಸೇರಿದವು?

..............................................................................................................

೩) ಪುಟ್ಟಮಕ್ಕಳು ಎಲ್ಲಿ ಆಡುತ್ತಿದ್ದವು?

..............................................................................................................

೪) ಜೀವಿಗಳು ಉಸಿರಾಡಲು ಏನು ಬೇಕು?

..............................................................................................................

©KTBS
Not to be republished





**ಋ) ಈ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ವಿದ್ಯೆ ಎಲ್ಲರಿಗೂ ನುಡಿದ ಹಿತವಚನವೇನು?

....................................................................................................

....................................................................................................

....................................................................................................

೨. ಗುರುಪುರ ಹೇಗೆ ಶೋಭಿಸುತ್ತಿತ್ತು?

....................................................................................................

....................................................................................................

....................................................................................................

**ಎ) ಈ ಪಾಠದಿಂದ ಮಾದರಿಯಂತೆ ಜೋಡಿ ಪದಗಳನ್ನು ಹುಡುಕಿ ಬರೆಯಿರಿ.**

**ಮಾದರಿ :** ಮಳೆ–ಬೆಳೆ

೧) .........................

೨) .........................

೩) .........................

೪) .........................

**ಏ) ಕೊಟ್ಟಿರುವ ಪದಗಳನ್ನು ಉಚ್ಚರಿಸುತ್ತ ನಕಲು ಮಾಡಿರಿ.**

೧) ಬಣ್ಣಬಣ್ಣದ – ........................................

೨) ಬಗೆಬಗೆಯ – ........................................

೩) ಘಮಘಮ – ........................................

೪) ಪುಟ್ಟಪುಟ್ಟ – ........................................

©KTBS Not to be republished







## ಭಾಷಾ ಚಟುವಟಿಕೆ

**ಅ) ಸಂಬಂಧ ಸೂಚಕ ಪದಗಳನ್ನು ಬರೆಯಿರಿ.**

**ಉದಾಹರಣೆ : ಅಪ್ಪ-ಅಮ್ಮ**

೧) ಅತ್ತೆ - ..........................................

೨) ಚಿಕ್ಕಪ್ಪ - ..........................................

೩) ದೊಡ್ಡಮ್ಮ - ..........................................

೪) ಅಣ್ಣ - ..........................................

**ಆ)** ೧. ಶಾಲೆಯಲ್ಲಿ ಆಚರಿಸುವ ಆಚರಣೆಗಳ ಬಗ್ಗೆ ಮಾತನಾಡಿರಿ.

೨. ನಿನ್ನ ತರಗತಿ ಕೋಣೆಯಲ್ಲಿರುವ ವಸ್ತುಗಳನ್ನು ಕುರಿತು ಮಾತನಾಡಿರಿ.

## ಯೋಜನೆ

೧. ನಿಮ್ಮ ಮನೆಯಲ್ಲಿ ಇರುವ ಇಪ್ಪತ್ತು ವಸ್ತುಗಳನ್ನು ಪಟ್ಟಿಮಾಡಿರಿ.

೨. ನಿಮ್ಮ ಮನೆಯಲ್ಲಿ ಹಬ್ಬದ ದಿನ ತಯಾರಿಸುವ ಬಗೆಬಗೆಯ ತಿನಿಸುಗಳ ಹೆಸರುಗಳನ್ನು ಪಟ್ಟಿಮಾಡಿರಿ.

### ಶುಭನುಡಿ

* ಸಮಾನಶೀಲರೊಂದಿಗೆ ಗೆಳೆತನ ಸಂಪಾದಿಸಬೇಕು.
* ಯಾರೂ ಯಾರಿಗಿಂತ ದೊಡ್ಡವರಲ್ಲ.
* ಅಹಂಕಾರ ಮಾನವನ ಬದುಕನ್ನು ಕೆಡಿಸುತ್ತದೆ.

©KTBS Not to be republished



# ಪದ ಖಜಾನೆ

## ಅ

ಅದುರು – ಕಂಪಿಸು, ನಡುಗು

ಅರಗು – ಪಚನವಾಗು, ಕರಗು.

ಅಹಿಂಸೆ – ಪೀಡಿಸದಿರುವಿಕೆ

ಅನೀತಿ – ಅನ್ಯಾಯ

## ಆ

ಆಕೃತಿ – ಆಕಾರ, ರೂಪ

ಆಧಾರ – ಆಶ್ರಯ, ಮೂಲ

ಆವೇಶ – ರೋಷ, ಸಿಟ್ಟು

## ಉ

ಉಚ್ಚ – ಉನ್ನತ, ಎತ್ತರದ

ಉಡುಪು–ಉಡುವ ಬಟ್ಟೆ

ಉತ್ಪಾದಿಸು–ತಯಾರಿಸು, ಸಿದ್ಧಪಡಿಸು

## ಎ

ಎದುರುಬದುರಾಗಿ – ಮುಖಾಮುಖಿಯಾಗಿ, ಅಭಿಮುಖವಾಗಿ

ಎದೆಗುಂದು – ಧೈರ್ಯ ಕಳೆದುಕೊಳ್ಳು, ಹೆದರು

## ಒ

ಒಗೆ – ಎಸೆ, ಬಿಸಾಕು

©KTBS Not to be republished

## ಕ

ಕಪಾಟು – ಬೀರು, ಅಲಮಾರು
ಕರ್ತವ್ಯ– ಕೆಲಸ, ಕಾರ್ಯ
ಕರ್ರನೆ – ಕಪ್ಪಗೆ
ಕರುಣಿಸು – ಮರುಕದಿಂದ ನೀಡು, ದಯಪಾಲಿಸು
ಕಾಡು – ಪೀಡಿಸು, ತೊಂದರೆ ಕೊಡು, ವನ, ಅರಣ್ಯ
ಕಾತರ – ಆತುರ, ಉತ್ಸುಕತೆ
ಕೆದರು – ಹರಡು
ಕುಟಿಲ – ವಂಚನೆ, ಮೋಸ
ಕುಂದು – ಕುಗ್ಗು
ಕೊಚ್ಚೆ – ಕೊಳೆತ ವಸ್ತು
ಕೊಂಡಾಡು – ಹೊಗಳು, ಪ್ರಶಂಸೆ ಮಾಡು
ಕೋರು–ಬಯಸು, ಬೇಡು

## ಗ

ಗಡಿಗೆ – ಮಣ್ಣಿನ ಪಾತ್ರೆ
ಗೆಳೆಯ – ಸಂಗಡಿಗ, ಜೊತೆಗಾರ, ಮಿತ್ರ
ಗುಟ್ಟು – ರಹಸ್ಯ
ಗೂಡು – ಪಕ್ಷಿಗಳ ವಾಸಸ್ಥಾನ, ಪೊಟರೆ

## ಚ

ಚಕ್ರ – ಗಾಲಿ
ಚರಂಡಿ – ಗಟಾರ, ಮೋರಿ
ಚಾಲು – ಆರಂಭ (ಚಲಾವಣೆ)
ಚಿಂತೆ – ಯೋಚನೆ, ಕಳವಳ
ಚೀತ್ಕಾರ – ಅರಚುವಿಕೆ, ಬೊಬ್ಬಿರಿಯುವಿಕೆ

©KTBS Not to be republished

## ಜ

ಜಗಳ – ಕಲಹ, ಕಿತ್ತಾಟ
ಜೋಪಾನ – ಎಚ್ಚರಿಕೆ, ರಕ್ಷಣೆ

## ತ

ತಟ್ಟನೆ – ಕೂಡಲೆ
ತ್ರಾಣ – ಶಕ್ತಿ
ತ್ರಿಕೋನ – ಮೂರು ಕೋನಗಳ ಆಕೃತಿ
ತೋರುವೆ – ಕಾಣಿಸುವೆ

## ದ

ದರಬಾರ – ಸಭಾಸ್ಥಾನ
ದವಸ – ಕಾಳು
ದರ್ಪ – ಜಂಭ, ಅಹಂಕಾರ
ದಿಕ್ಕಾಪಾಲು – ಚದುರು
ದುಂಡನೆ – ವೃತ್ತಾಕಾರ, ವರ್ತುಲ

## ಧ

ಧಾಟಿ – ರೀತಿ

## ನ

ನನಸು – ಸತ್ಯ, ನಿಜ.
ನಿತ್ರಾಣ – ಬಲಹೀನ, ದುರ್ಬಲ
ನೀಚ – ಕೆಳಮಟ್ಟದ
ನೀತಿ – ನಿಯಮ
ನ್ಯಾಯ – ಕಾನೂನು

## ಪ

ಪರಡಿ – ತಕ್ಕಡಿ, ತ್ರಾಸು
ಪರರು – ಅನ್ಯರು, ಹೊರಗಿನವರು
ಪೋರಿ – ತುಂಟಿ

©KTBS Not to be republished

ಪದರ – ಮಡಿಕೆ, ಪೊರೆ

ಪ್ರವಾಸಿ – ಪ್ರಯಾಣಿಕ, ಯಾತ್ರಿಕ

ಪ್ರವಾಹ – ತುಂಬಿ ಹರಿಯುವಿಕೆ

ಪೌಷ್ಟಿಕ – ಪುಷ್ಟಿಕೊಡುವ; ಗಟ್ಟಿಮುಟ್ಟುತನ ಕೊಡುವ

ಪರಿಮಳ – ಸುವಾಸನೆ, ಕಂಪು

ಪುಷ್ಟಿ – ಬಲಿಷ್ಠ

ಪೂಸು – ಹಚ್ಚು, ಲೇಪಿಸು

ಪೋರಿ – ತುಂಟಿ

## ಬ

ಬದಿ – ಪಕ್ಕ, ಮಗ್ಗಲು

ಬಲು – ಬಹಳ

## ಮ

ಮಧುರ – ಸಿಹಿಯಾದ, ಮನೋಹರ.

ಮಜ – ಸಂತೋಷ, ಆನಂದ

ಮಲಿನ – ಕೊಳೆ, ಹೊಲಸು

ಮರುಗು – ಮನಸ್ಸು ಕರಗು, ಸಂಕಟಪಡು

ಮುಸ್ಸಂಜೆ – ಸೂರ್ಯ ಮುಳುಗುವ ಹೊತ್ತು

ಮೊಗ – ಮುಖ

ಮಾಸ್ತರರು – ಶಿಕ್ಷಕರು

## ರ

ರೋಗರುಜಿನ–ಕಾಯಿಲೆ

©KTBS Not to be republished

## ವ

ವಿಶ್ವ ವಿಖ್ಯಾತ – ಜಗತ್ ಪ್ರಸಿದ್ಧ
ವ್ಯಾಪಾರಿ – ವರ್ತಕ

## ಶ

ಶೃಂಗಾರ–ಅಲಂಕಾರ, ಸಿಂಗಾರ

## ಸ

ಸಣಕಲು – ಸೊರಗಿದ

ಸಮೂಹ – ಗುಂಪು

ಸೆಳೆಯು – ಎಳೆಯು, ಆಕರ್ಷಿಸು

ಸಂದೇಶ – ಮಹತ್ವದ ಮಾತು, ವಿಶೇಷ ಸುದ್ದಿ

ಸಂಭ್ರಮ – ಸಡಗರ

ಸಂತೃಪ್ತಿ – ಸಂತೋಷ, ನೆಮ್ಮದಿ

ಸುಸ್ತಾಗು– ಆಯಾಸಗೊಳ್ಳು

ಸೂಸು – ಬೀರು, ಹರಡು

ಸೊತ್ತು – ಸ್ವತ್ತು, ವಸ್ತು

ಸ್ಪಂದಿಸು – ಮಿಡಿಯು

ಸುಮ್ಮನೆ – ಕಾರಣವಿಲ್ಲದೆ

## ಹ

ಹುಯ್ಯು – ಎರೆಯು, ಹೊಯ್ಯು
ಹುಸಿ – ಸುಳ್ಳು, ಅಸತ್ಯ

©KTBS Not to be republished